₹ 5/-

# ನೇಸರು

## ತಿಂಗಳೋಲೆ

PAGES 20

JULY 2023 | Nesaru Tingalole | Vol. XLI - 07




# ಏಕರೂಪ ನಾಗರಿಕ ಸಂಹಿತೆ?

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಅಸೋಸಿಯೇಷನ್ನಿನಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ

ವಿದುಷಿ ಶ್ರೀಮತಿ ಕೃತ್ತಿಕಾ ಶ್ರೀನಿವಾಸನ್ ಅವರು ಸಂಗೀತದ ಕ್ಷೇತ್ರದಲ್ಲಿ ಯುವ ಕಲಾವಿದೆ. ಇವರು ತಮ್ಮ ಸಂಗೀತ ಶಿಕ್ಷಣವನ್ನು ವಿದುಷಿ ಟಿ.ಎಸ್.ವಸಂತ ಮಾಧವಿ ಅವರಿಂದ ಕಲಿತು ಮುಂದೆ ಶ್ರೀಯುತ ವಿದ್ವಾನ್ ಆನೂರು ಅನಂತಕೃಷ್ಣ ಮತ್ತು ಶ್ರೀಯುತ ಚಿತ್ರವೀಣಾ ರವಿಶಂಕರ್ ಅವರಿಂದ ಕಲಿಕೆಯನ್ನು ಮುಂದುವರಿಸುತ್ತಿದ್ದಾರೆ. ಹತ್ತಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.




ಈ ಯುವ ಕಲಾವಿದೆಯಿಂದ ಜೂನ್ 13, 2023ರಂದು ಮೈಸೂರು ಅಸೋಸಿಯೇಷನ್ ನಲ್ಲಿ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಇವರೊಂದಿಗೆ ವೈಲಿನಿನಲ್ಲಿ ಶ್ರೀಯುತ ದಿನೇಶ್ ಮತ್ತು ಮೃದಂಗದಲ್ಲಿ ಶ್ರೀಯುತ ರೋಹಿತ್ ಪ್ರಸಾದ್ ಅವರು ಸಹಕರಿಸಿದರು.

ಕಾರ್ಯಕ್ರಮವನ್ನು ವಿದ್ವಾನ್ ದಿವಂಗತ ಶ್ರೀ ಬಾಲಮುರಳೀಕೃಷ್ಣ ಅವರ ಷಣ್ಮುಖ ಪ್ರಿಯ ರಾಗದ ಪದವರ್ಣದೊಂದಿಗೆ ಪ್ರಾರಂಭಿಸಿ ಕಂಜಾಮಾರ್ ಅಯ್ಯರ್ ಅವರ ಅಪರೂಪದ ಕೃತಿ ರುದ್ರಪ್ರಿಯರಾಗ ಮಿಶ್ರಛಾಪು ತಾಳದಲ್ಲಿ ಅತ್ಯಂತ ಪ್ರೌಢ ರೀತಿಯಲ್ಲಿ ಪ್ರಸ್ತುತ ಪಡಿಸಿ ಸ್ವರ ಪ್ರಸ್ತಾರ ಕೂಡಾ ಮಾಡಿದರು. ಈ ರಚನೆಯಲ್ಲಿ ಅವರಿಗೆ ತಾಳದ ಮೇಲೆ ಇರುವ ಹಿಡಿತಕ್ಕಾಗಿಯೇ ಅವರಿಗೆ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಿಂದ ಬಹುಮಾನ ದೊರೆತಿರುವುದು ಎಂದು ತಿಳಿದು ಬಂತು.

ಕಾರ್ಯಕ್ರಮವನ್ನು ಮುಂದುವರಿಸುತ್ತ ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಕದನ ಕುತೂಹಲ ರಾಗ ಮತ್ಯ ತಾಳ ದ ಅತ್ಯಂತ ಸುಂದರ ಹಾಗೂ ಅಪರೂಪದ ರಚನೆಯನ್ನು ಪ್ರಸ್ತುತ ಪಡಿಸಿದರು.

ಮುಂದೆ ಮೋಹನ ರಾಗಾಲಾಪನೆಯೊಂದಿಗೆ ಮಹಿಳಾ ಹರಿದಾಸೆ ಶ್ರೀಮತಿ ಅಂಬಾಬಾಯಿ ಅವರ ರಚನೆಯನ್ನು ಹಾಡಿ ನಮ್ಮನ್ನು ರಂಜಿಸಿದರು. ತ್ರಿಮೂರ್ತಿಗಳಲ್ಲಿ ಒಬ್ಬರಾದ ಶ್ರೀಯುತ ಮುತ್ತುಸ್ವಾಮಿ ದೀಕ್ಷಿತರ ಅತ್ಯಂತ ಜನಪ್ರಿಯ ಸಾಮ ರಾಗದ ಕೃತಿಯಾದ ಅನ್ನಪೂರ್ಣೆ ವಿಶಾಲಾಕ್ಷಿಯನ್ನು ಹಾಡಿದರು. ಕರ್ನಾಟಕದ ಸಂಗೀತದಲ್ಲಿ ಅತ್ಯಂತ ಕಷ್ಟ ಎಂದು ತಿಳಿದಿರುವ ರಾಗ, ತಾನ, ಪಲ್ಲವಿಯನ್ನು ಅತ್ಯಂತ ಸರಳ ರೀತಿಯಲ್ಲಿ ರಾಷ್ಟ್ರಕವಿ ಕುವೆಂಪು ಅವರ ರಾಮಾಯಣ ದರ್ಶನಂ ಕಾವ್ಯದ ಸಾಲುಗಳಿಗೆ ಅಳವಡಿಸಿ ಸುಂದರವಾಗಿ ಹಾಡಿದರು. ನಂತರದ ಪ್ರಸ್ತುತಿ ದೇವರನಾಮ, ತಿಲ್ಲಾನ ಮತ್ತು ಮಂಗಳ. ಒಟ್ಟಾರೆ ಹೇಳಬೇಕೆಂದರೆ ಒಂದು ಒಳ್ಳೆಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟ ಎಲ್ಲಾ ಕಲಾವಿದರಿಗೂ ತುಂಬು ಹೃದಯದಿಂದ ಅಭಿನಂದನೆಗಳು.




ಕಲಾವಿದರನ್ನು ಪರಿಚಯಿಸಿದ ಶ್ರೀಯುತ ನಾರಾಯಣ ನವಿಲೇಕರ್, ಧನ್ಯವಾದಗಳನ್ನರ್ಪಿಸಿದ ಶಶಿಕಾಂತ ಜೋಶಿ ಹಾಗೂ ನೆರೆದ ಶ್ರೋತೃವೃಂದಕ್ಕೆ ಒಂದು ಚಪ್ಪಾಳೆಯೊಂದಿಗೆ ಧನ್ಯವಾದಗಳು.

ವರದಿ : **ಶ್ರೀಮತಿ ಶ್ಯಾಮಲಾ ರಾಧೇಶ್**

ನೇಸರು ತಿಂಗಳೋಲೆ

ಸಂಪುಟ 41 ಜುಲೈ–2023 ಸಂಚಿಕೆ 7

# ಬಾಲ್ಯದ ಆಟಗಳು



✍ **ಡಾ. ಜ್ಯೋತಿ ಸತೀಶ್**

ಯಾರಲ್ಲಿ ಕೇಳಿದ್ರೂ, ನಿಮ್ಮ ಜೀವನದ ಮರೆಯಲಾಗದ ಹಂತ ಯಾವುದು ಅಂತ ಕೇಳಿದರೂ ಎಲ್ಲರ ಉತ್ತರ ಒಂದೇ. ಅದೇ ಬಾಲ್ಯತನ. ಬಾಲ್ಯದಲ್ಲಿನ ಕೆಲವೊಂದು ನೆನಪುಗಳು ಮಾತ್ರ ಎಲ್ಲರ ಮನಸ್ಸಲ್ಲಿ ಹಚ್ಚ ಹಸಿರಾಗಿ ಉಳಿದಿರುತ್ತದೆ. ನೆನೆದಷ್ಟು ಮುಗಿಯದ ನೆನಪುಗಳ ಸುಂದರ ಪಯಣ, ಆ ಮುಗ್ದತೆ, ಚಿಕ್ಕ ಚಿಕ್ಕ ವಿಷಯಕ್ಕೂ ಸಂಭ್ರಮಿಸಿದ ಕ್ಷಣಗಳು ವರ್ಣಿಸಲು ಪದಗಳಿಲ್ಲ. ಆರಂಭದ ದಿನ ಶಾಲೆಗೆ ಹೋಗುವ ಖುಷಿಯೇ ಬೇರೆ. ಹೊಸ ಪುಸ್ತಕ, ಹೊಸ ಬ್ಯಾಗ್, ಹಾಗೆ ಹೊಸ ಪೆನ್ನು, ಪೆನ್ಸಿಲ್ ನ್ನು ಉಪಯೋಗಿಸದೆ ಹಳೆಯದನ್ನು ಉಪಯೋಗಿಸಿ, ತಿಂಗಳುಗಟ್ಟಲೆ ಹೊಸದನ್ನು ಜೋಪಾನ ಮಾಡಿದ್ದು. ಹೊಸ ಪುಸ್ತಕ ಸುವಾಸನೆ ಇರಬಹುದು, ಪರಿಮಳ ಬೀರುವ ಪೆನ್ನಿನಿಂದ ಬರೆದು ಅದರ ಸುವಾಸನೆಯನ್ನು ಸವಿಯೋದು. ಹೊಸ ಪುಸ್ತಕಕ್ಕೆ ಬೈಯಿಡಿಂಗ್ ಮಾಡೋದು, ಲೇಬಲ್ ಹಾಕಿಸಿ, ನಮ್ಮ ಹೆಸರು ಮತ್ತು ತರಗತಿ ಬರೆಯೋದು. ಯಾವುದೇ ಹಮ್ಮು ಬಿಮ್ಮು ಇಲ್ಲದೆ, ಯಾವುದೇ ಮೇಲು ಕೀಳು ಇಲ್ಲದೆ ಎಲ್ಲರೂ ಒಟ್ಟಿಗೆ ಬೆರೆತು ಸಾಗುತ್ತಿದ್ದ ದಿನಗಳು. ಎಲ್ಲರೂ ಮನೆಯಿಂದ ತಂದ ಟಿಫಿನ್ ಗಳನ್ನು ಹಂಚಿ ತಿಂದ ಆ ಕ್ಷಣಗಳು ಇವೆಲ್ಲ ಬಾಲ್ಯ ಜೀವನದ ಸುಮಧುರ ಕ್ಷಣಗಳು.

ಮಳೆಗಾಲ ಬಂತೆಂದರೆ ಸಾಕು, ನಮಗೆಲ್ಲ ಖುಷಿಯೋ ಖುಷಿ, ಮೊದಲ ಮಳೆಯಲ್ಲಿ ನೆನೆಯೋದು ಆಗಿರಬಹುದು, ಮಣ್ಣಿನ ಸುವಾಸನೆ ಆಗಿರಬಹುದು. ಗದ್ದೆಯ ಏರುಗಡಲ್ಲಿ ತುಂಬಿದ ನೀರಲ್ಲಿ ಹುಟ್ಟಿದ ಚಿಕ್ಕ ಚಿಕ್ಕ ಮೀನುಗಳನ್ನು ಹಿಡಿದು ಚಿಕ್ಕ ಬಾಟಲಿಯಲ್ಲಿ ತುಂಬಿಸಿ, ದಿನಾ ಅದನ್ನು ಗಮನಿಸುವುದು. ಇವತ್ತು ಎಷ್ಟು ದೊಡ್ಡದಾಯಿತು ಅಂತ. ಮಳೆಯ ನೀರು ರಭಸವಾಗಿ ಹರಿಯುವ ಜಾಗದಲ್ಲಿ ಕಾಗದದ ದೋಣಿಯನ್ನು ಬಿಡುವುದು. ಜೆಲೇಬಿ ಆಟವಾಗಿರಬಹುದು. ಒಡೆದ ಕಲರ್ ಕಲರ್ ಬಳೆಗಳನ್ನು ಒಟ್ಟು ಸೇರಿಸಿ ಆಡಿದ ಆಟಗಳಾಗಿರಬಹುದು, ಕಳ್ಳ ಪೊಲೀಸ್ ಆಟವಾಗಿರಬಹುದು, ಗುಡ್ನಾಟ, ಕಣ್ಣೂ ಮುಚ್ಚಾಟ. ಇವೆಲ್ಲ ಆಗಿನ ಕಾಲದಲ್ಲಿ ನಾವು ಆಡುತ್ತಿದ್ದ ಆಟಗಳು. ಆದರೆ ಈವಾಗಿನ ಮಕ್ಕಳ ಬಾಲ್ಯ ಕೈಯಲ್ಲಿ ಮೊಬೈಲ್ ಹಿಡಿದುಕೊಂಡೇ ಕಳೆದುಹೋಗುತ್ತದೆ.

ನಮ್ಮ ಬಾಲ್ಯದಲ್ಲಿ ಟಿವಿ, ಮೊಬೈಲ್ ಗಳ ಹಾವಳಿ ಇಲ್ಲದಿದ್ದ ಕಾರಣ ಎಲ್ಲರೂ ದೈಹಿಕ ಹಾಗೂ ಬೌದ್ಧಿಕ ಚಟುವಟಿಕೆಗಳಲ್ಲಿ ತಮ್ಮನ್ನು ಮೀಸಲಾಗಿರಿಸಿಕೊಳ್ಳುತ್ತಿದ್ದರು. ಹೆಚ್ಚಿನವರಿಗೆ ಕಾದಂಬರಿ, ಮಾಸಪತ್ರಿಕೆ, ವಾರಪತ್ರಿಕೆಗಳನ್ನು ಓದುವ ಹವ್ಯಾಸವಿರುತ್ತಿತ್ತು. ಜೀವನದಲ್ಲಿ ಏಕಾಂಗಿತನ ಕಾಡದಂತೆ ಈ ಓದುವಿಕೆ ನೋಡಿಕೊಳ್ಳುತ್ತಿತ್ತು. ಬಾಲ್ಯ ಜೀವನದ ಆ ತುಂಟಾಟ ಎಷ್ಟೊಂದು ಚೆಂದ! ಬಾಲ್ಯದ ಬದುಕಿನ ಆ ದಿನಗಳು ಎಂದೂ ಮರೆಯದ ಆ ಕ್ಷಣಗಳು.

ಆವಾಗಿನ ನಮ್ಮ ತಿಂಡಿತಿನಿಸುಗಳು ಬೇರೆಯದೆ ಆಗಿದ್ದವು. ಈವಾಗಿನ ಹಾಗೆ ಬರ್ಗರ್, ಫಿಜಾ ಇದೆಲ್ಲ ಇರಲಿಲ್ಲ. ಹುರಿದ ಹುಣಸೆ ಬೀಜ, ಪೇರಳೆ ಹಣ್ಣು, ನೇರಳೆ ಹಣ್ಣು, ಮಾವು, ಹಲಸು, ಮುಳ್ಳುಹಣ್ಣು ಇತ್ಯಾದಿ ಹಣ್ಣುಗಳನ್ನು ಮನಸೋ ಇಚ್ಛೆ ತಿಂದು ಆರೋಗ್ಯಯುತವಾಗಿರುತ್ತಿದ್ದ ದಿನಗಳವು. ಬೇಸಿಗೆ ರಜಾದಿನಗಳು ಬಂತೆಂದರೆ ಸಮ್ಮರ್ ಕ್ಲಾಸ್ ಅಂತೆನೂ ಆಗ ಇರಲಿಲ್ಲ. ಬರೇ ಆಟ ಆಡುವುದು. ಅಜ್ಜಿ ಮನೆಗೆ ಹೋಗಿ ರಜಾ ದಿನವನ್ನು ಆನಂದಿಸುತ್ತಿದ್ದ ಕಾಲ. ಕೆರೆಯಲ್ಲಿ ಈಜು ಕಲಿಯುವುದು, ಮೀನು ಹಿಡಿಯುವುದು, ಪ್ಲಾಸ್ಟಿಕ್ ಜರಿಗಳನ್ನು ಒಟ್ಟು ಸೇರಿಸಿ ಚೆಂಡನ್ನು ಮಾಡಿ, ರಗೋಲಿ ಆಟ ಆಡುವುದು, ಆವಾಗಿನ ಕಾಲದಲ್ಲಿ ಕಂಪ್ಯೂಟರ್ ಗಳೆಲ್ಲ ಇರಲಿಲ್ಲ, ಮರದಿಂದ ಮಾಡಿದ ಗಾಡಿ, ಕಾಗದ, ಹಿಡಿಕಡ್ಡಿ ಹಾಗೂ ಅಂಟಿಸಲಿಕ್ಕೆ ಅನ್ನ ಇವೆಲ್ಲ ಉಪಯೋಗಿಸಿ ಗಾಳಿಪಟ ಮಾಡುತ್ತಿದ್ದೆವು. ತೆಂಗಿನ ಗರಿಯಿಂದ ಮಾಡಿದ ಗಿರಿಗಿಟ್ಲೆ, ಜೋಕಾಲಿ ಆಡುತ್ತಾ ಸಮಯ ಕಳೆಯುತ್ತಿದ್ದೆವು.

ವರುಷಗಳು ಕಳೆದಂತೆ ನಮ್ಮ ಜೀವನ ಶೈಲಿಯಲ್ಲೂ ಬದಲಾವಣೆಗಳಾಗಿವೆ. ಬಾಲ್ಯ ಜೀವನದ ನೆನಪುಗಳು ಇಂದಿಗೂ ಹಸಿರಾಗಿಯೇ ಉಳಿದಿವೆ. ಮತ್ತೊಮ್ಮೆ ಆ ದಿನಗಳು ಮರುಳದೆಂದು ತಿಳಿದಿದ್ದರೂ, ಆ ದಿನಗಳು ಮರುಳಲಿ ಎಂದು ಮನ ಬಯಸುತ್ತಿದೆ.

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

(ಕಳೆದ ಸಂಚಿಕೆಯಿಂದ)

# ಹೀಗಿತ್ತು ಮಲೆನಾಡು



✍ ಜಿ.ವಿ.ನವಿಲೇಕರ್

(ಈ ದೀರ್ಘ ಲೇಖನವು ಕೊಳವಳ್ಳಿ ಪ್ರಕಾಶನ ಪ್ರಕಟಿಸಿರುವ "ನನ್ನೊಳಗಿನ ಮಲೆನಾಡು "ಪುಸ್ತಕದಲ್ಲಿ ಪ್ರಕಟವಾಗಿದೆ)

## ಅಮಂಗಳ / ನಿಷಿದ್ಧಗಳು:

ಖಾಯಿಲೆಯವರು ಮನೆಯಲ್ಲಿದ್ದರೆ ನಾಯಿಗಳು ಅಳುವಂತಿಲ್ಲ. ಗೂಬೆ ವಾಸದ ಮನೆ ಮೇಲೆ ಕೂರುವಂತಿಲ್ಲ. ಕಾಗೆ ಹಾರುವಾಗ ಮೈಸೋಕಿಸಕೂಡದು. ಹಲ್ಲಿ ಮೈಮೇಲೆ ಬೀಳುವಂತಿಲ್ಲ. ಕಾಳಿಂಗಸರ್ಪ ಮನೆಯೊಳಗೆ ಬರುವಂತಿಲ್ಲ. ಮೃತಾಶೌಚದವರು ಬೇರೆಯವರ ವಾಸದ ಮನೆಯ ಒಳಗೆ ಪ್ರವೇಶಿಸುವಂತಿಲ್ಲ. ಶವ ದರ್ಶನವಾದರೆ ಸ್ನಾನ ಮಾಡಬೇಕು. ಎತ್ತಿನ ಹೋರಿ ಅನಾಮತ್ತು ವಾಸದ ಮನೆ ಪ್ರವೇಶ ನಿಷಿದ್ಧ. ಉಡ ಅಥವಾ ಕಾಳಿಂಗಸರ್ಪ ವಾಸದ ಮನೆಯೊಳಗೆ ಬಂದರೆ ೬ ತಿಂಗಳು ಮನೆ ಬಿಡಬೇಕು. ರಾತ್ರಿ ಜಾನುವಾರು ಕೊಟ್ಟಿಗೆಯಲ್ಲಿ ಕೂಗಲು ಶುರು ಮಾಡಿದರೆ ಅಮಂಗಳ, ವ್ಯವಸಾಯದ ಫಸಲು ನಿರೀಕ್ಷೆಗಿಂತ ದುಪ್ಪಟ್ಟು ಬಂದರೆ ಅಶುಭ, ಅಮಂಗಳ. ಚಪ್ಪರದಲ್ಲಿ ಅಡಿಕೆ ಇದ್ದಾಗ ಪಾದರಕ್ಷೆ ಧರಿಸಿ ಚಪ್ಪರದ ಕೆಳಗೆ ತಿರುಗಾಡುವಂತಿರಲಿಲ್ಲ. ಪ್ರಯಾಣ ಹೊರಟಾಗ 'ಎಲ್ಲಿಗೆ' ಎಂದು ಕೇಳುವಂತಿರಲಿಲ್ಲ. ಪ್ರಯಾಣ ಹೊರಟಾಗ ಖಾಲಿ ಕೊಡ, ಸೌದೆ ಹೊರೆ, ಬೆಕ್ಕು ಅಡ್ಡ ಬರುವುದು ಮುಂತಾಗಿ ಅಮಂಗಳ. ಗ್ರಹಣ ಕಾಲಗಳಲ್ಲಿ ಗ್ರಹಣದ ನಂತರ ಸ್ನಾನ ಮಾಡದಿದ್ದರೆ ಅಶೌಚ. ಶುಭವಾರ್ತೆ ಸಂಭಾಷಣೆ ನಡೆಯುತ್ತಿರುವಾಗ ಒಂಟಿ ಸೀನು ಅಮಂಗಳ. ಅನ್ನದ ಪಾತ್ರೆ ಮುಟ್ಟಿ ಕೈ ತೊಳೆಯದಿದ್ದರೆ ಕೇಡು. ಬಹಿಷ್ಠೆಯರನ್ನು ಮುಟ್ಟಿದರೆ ಮೈಲಿಗೆ. ಉತ್ತರ ದಿಕ್ಕಿಗೆ ತಲೆ ಇಟ್ಟು ಮಲಗಿದರೆ ಆಯುಸ್ಸು ಕ್ಷೀಣ. ರಾತ್ರಿ ಹೊತ್ತು ಸುಣ್ಣ ಮನೆಯಿಂದ ಹೊರಗಿನವರಿಗೆ ಕೊಟ್ಟರೆ ಲಕ್ಷ್ಮಿ ಮಾಯವಾಗುತ್ತಾಳೆ. ಕಾಲು ತೊಳೆದಲ್ಲಿ ಹಿಮ್ಮಡಿ ಪೂರ್ಣ ಒದ್ದೆಯಾಗಬೇಕು, ತಪ್ಪಿದಲ್ಲಿ ಶನಿಬಾಧೆ. ಕೈಕಾಲುಗಳು ಉಗುರು ಮನೆಯೊಳಗೆ ತೆಗೆದು, ಮನೆಯಲ್ಲೇ ಬಿಟ್ಟರೆ ಮಾಟ ಮಾಡಿದಂತೆ. ಹಗಲಿಡೀ ಹಾಸಿಗೆ ಮೇಲೆ ಮಲಗುತ್ತಿದ್ದರೆ ದಾರಿದ್ರ್ಯ. ಪ್ರಯಾಣ ಹೊರಡುವ ವೇಳೆ ಊಟ ಮಾಡಿ ಹೋಗು ಎಂದು ಹೇಳುವಂತಿಲ್ಲ ಇತ್ಯಾದಿ.

## ಶುಭ ಶಕುನಗಳು:

ಮನೆ ಸಮೀಪ ಕಾಗೆ ತದೇಕದೃಷ್ಟಿಯಿಂದ ಯಾವುದೋ ದಿಕ್ಕನ್ನು ವೀಕ್ಷಿಸುತ್ತಾ 'ಕರ್' ಎಂದು ಉದ್ದವಾಗಿ ನಿಧಾನವಾಗಿ ಕೂಗುತ್ತಿದ್ದಲ್ಲಿ ನೆಂಟರಾಗಮನ. ಮನೆಯಿಂದ ಕೆಲಸಕಾರ್ಯಗಳಿಗೆ ಹೊರಟಾಗ ಹಾಲಿನವರು ಬಂದರೆ ಶುಭ, ಶವ ಕಂಡರೆ ಶುಭ. ಕಾಗೆ ಎಡದಿಂದ ಬಲಕ್ಕೆ ಹಾರಿದರೆ ಶುಭ. ದೇವರ ಮಂಟಪದಲ್ಲಿ ಹೂವು ದೇವರ ಪ್ರತಿಮೆಗೆ ಬಲಕ್ಕೆ ಬಿದ್ದರೆ ಶುಭ. ಹಾಲು ಉಕ್ಕಿದರೆ, ಉಕ್ಕಿಸಿದರೆ ಶುಭ. ಸಂಭಾಷಣೆಯಲ್ಲಿ ಈರ್ವರ ಬಾಯಿಂದ ಏಕಕಾಲದಲ್ಲಿ ಒಂದೇ ಅರ್ಥದ ಪದಗಳ ಏಕವಾಕ್ಯ ಬಂದಲ್ಲಿ ನೆಂಟರು ಬರುವ ಸೂಚನೆ.

ಈ ಮೇಲೆ ಬರೆದ ಸ್ಥೂಲ ಸಮಗ್ರ ವಿವರಗಳು ಈಗ ಸುಮಾರು ೭೦-೮೦ ವರ್ಷಗಳ ಹಿಂದೆ ಮಲೆನಾಡಿನ ವ್ಯವಸಾಯಗಾರರ ಜನಜೀವನದ ಸಾಮಾಜಿಕ ವಿವರಗಳಾಗಿವೆ. ಇದರಲ್ಲಿ ಪೂರ್ವಿಕರಿಂದ ಕೇಳಿ ತಿಳಿದ ವಿಷಯಗಳೂ, ಲೇಖಕನ ಸ್ವಂತ ಅನುಭವದ ವಿಷಯಗಳೂ ಅಡಕವಾಗಿವೆ.

(ಮುಗಿಯಿತು)

(ಕಳೆದ ಸಂಚಿಕೆಯಿಂದ)

# ರಾಜಾರಾಮನಿಗೆ ಹಿಂದೆಂದು ಹೀಗಾಗಿರಲಿಲ್ಲ



(ಉಮಾ ರಾವ್ ಕಥೆಗಳು)

✍ **ಉಮಾ ರಾವ್**

ರಾಜಾರಾಮ ಕೂಗಿದ.

"ಏನಪ್ಪಾ ಯಾವ ಕಡೆ ಹೊರಟಿದ್ದೀಯ...?"

"ನನ್ನ....ಅಟ್ಟಿಗೆ...."
"ಎಲ್ಲಿಂದ...?"
"ಇನ್ನೆಲ್ಲಿಂದ ಸೋಮಿ.... ತೋಪಿನ ಕಡೆಯಿಂದ..."

"ಇವತ್ತು ಹುಲ್ಲು ಕೊಯ್ಯೋಕೆ ಹೋಗಿದ್ಯಾ?"

"ಇವತ್ತೇನು ಸೋಮಿ.... ದಿನಾ ಒಗ್ತೀನಿ.... ಚಿಕ್ಕಂದಿನಿಂದ ಇವತ್ತಿನ ತನಕ ಅದನ್ನೇ ಮಾಡ್ತಿರೋದೇ....ಇಲ್ಲದಿದ್ದರೆ ಒಟ್ಟೆ ತುಂಬ್ತೈತಾ...? ಪುಳ್ಳಿ ಆರಿಸಿ ಉಲ್ಲು ಕೊಯ್ದು ಒಯ್ತಿನಿ..... ಊರಿಗೆ ತಂದು ಬಸವಯ್ಯನ ತಾವ ಒಯ್ದು ಮಾರ್ತಿನಿ. ಬಂದ ಕಾಸಲ್ಲಿ ಅಷ್ಟು ಕಳ್ಳು, ಅಷ್ಟು ಗಂಜಿ ಕುಡಿದು ಮಲಗ್ತೀನಿ... ದಿನಾ ಅದೇಯಾ..."

"ರಜಾ ದಿನ ಬೇರೆ ಎಲ್ಲಾದರೂ ಹೋಗ್ತಾ ಇರಬೇಕಲ್ಲ.....ಬಯಲಾಟ .... ಸಿನೆಮಾ"

"ಸುಮ್ಕಿರಿ ಸ್ವಾಮಿ ಒಟ್ಟೆ ತುಂಬಿದ್ರೆ ಸಾಕಾಗಿದೆ.... ಇನ್ಯಾವ ಆಟ ಪಾಟ.... ಅದೆಲ್ಲ ನಮ್ಮಂತವರಿಗಲ್ಲ. ನಮಗೆ ಅದೆಲ್ಲ ಮನಸ್ಸಿಗೂ ಬರಾಕಿಲ್ಲ. ಮಾತು ಸಾಕೆಂದು ಆದೇಶವಿತ್ತಂತೆ ಮುಂದೆ ಸಾಗಿದ ಅವನು. ರಾಜಾರಾಮನಿಗೆ ಅವನನ್ನು ನೋಡಿ ಹೊಟ್ಟೆಕಿಚ್ಚಾಯಿತು. ಇವನನ್ನು ತನ್ನನ್ನು ಕಾಡುವಂತಹ ಪ್ರಶ್ನೆಗಳು ಇಲ್ಲವಲ್ಲ? ಹೊತ್ತಾದಂತೆ ಮತ್ತಷ್ಟು ಹಸಿವಾಗತೊಡಗಿತು. ತಾನೇನಾದರೂ ಹಸಿವು ಬಾಯಾರಿಕೆಯಿಂದ ಇಲ್ಲೇ ಸತ್ತು ಹೋದರೆ? ಹಸಿವು ಬಾಯಾರಿಕೆಯಿಂದ ಮರಣ ಎಂದು ನಾಳಿನ ಪೇಪರಲ್ಲಿ ಫೋಟೋ ಸಮೇತ ಒಂದು ಕಾಲಂ ಬರ್ತಿ, ತನ್ನ ಬಗ್ಗೆ ಬರಬಹುದು. ಒಳ್ಳೆಯ ಹ್ಯೂಮನ್ ಇಂಟರೆಸ್ಟ್ ಸ್ಟೋರಿ.

ಇದು ಆತ್ಮಹತ್ಯೆಯೇ? ಇದು ಆಕಸ್ಮಿಕವೇ? ಕೊಲೆಯೇ? ಬಿದ್ದು ಬಿದ್ದು ನಗತೊಡಗಿದ ರಾಜರಾಮ. ಸುಗುಣ ಏನೆನ್ನಬಹುದು? ಮೊದಲು ಆಘಾತ, ದುಃಖ... ಇದು ಹೇಗೆ ಸಾಧ್ಯ ಎಂಬ ಅಚ್ಚರಿ. ಆದರೆ ಎಷ್ಟು ದಿನ ಒಂದೆರಡು ತಿಂಗಳು, ಹೆಚ್ಚೆಂದರೆ ಒಂದೆರಡು ವರ್ಷ. ನಂತರ ಅವಳ ಪಾಡಿಗೆ ಅವಳ ಬದುಕು, ಚೀನಿಯ ಬದುಕು. ತಾನು ಸತ್ತರೆ ಮೋಸ ತನಗೆ! ಅವಳು ಮತ್ತೊಂದು ಮದುವೆಯಾಗಬಹುದೇ.... ಮದುವೆಯಾಗಿ ಬೇರೊಬ್ಬ ಗಂಡಸೊಂದಿಗೆ ತನ್ನ ಹಾಸಿಗೆಯ ಮೇಲೆ ದಿನ ಮಲಗಿ, ಇದು ಅನ್ಯಾಯ, ಏಕನ್ಯಾಯ... ಅವಳಿಗೆ ಏನಾದರೂ ಆದರೆ ತಾನು ಆಜನ್ಮ ಬ್ರಹ್ಮಚಾರಿಯಾಗಿರುತ್ತೇನೆಂದು ಹೇಳಬಲ್ಲನೇ? ಅರೆ..., ದೂರದಲ್ಲಿ.... ಅದೇನದು? ಒಂದು ವ್ಯಕ್ತಿ ಹೆಣ್ಣೋ ಗಂಡೋ ತಿಳಿಯದು. ಸ್ವಲ್ಪ ದೂರ ನಡೆಯುತ್ತೆ, ನಿಂತು ಅನುಮಾನಿಸುತ್ತಾ, ಸುತ್ತಲೂ ನೋಡುತ್ತೆ. ಏನೋ ಆಲಿಸಿ ಕೇಳುತ್ತೆ.... ಹತ್ತಿರ ಬಂದಂತೆ ಆಕರ ಹೆಚ್ಚು ಸ್ಪಷ್ಟವಾಯಿತು. ಸುಮಾರು 20-22 ವರ್ಷದ ಹುಡುಗಿ. ಮಣ್ಣು ಬಣ್ಣ ತಿರುವಿದ ಹಳದಿ ಸೀರೆ, ಹಸಿರು ರವಿಕೆ. ಕೈಯಲ್ಲಿ ಕೆಂಪು ಗಾಜಿನ ಬಳೆ, ಕತ್ತಿನಲ್ಲಿ ಕರಿದಾರ, ಅದಕ್ಕೊಂದು ತಾಯಿತ ಹಣೆಯಲ್ಲಿ ಕೆಂಪು ಕುಂಕುಮ ಕಣ್ಣುಗಳಲ್ಲಿ ಅದೇನೋ ಉದ್ವೇಗ ಹೊಳಪು ಉನ್ಮಾದ. ಇವನೆದುರಿಗೆ ಬಂದು ಇದ್ದಕ್ಕಿದ್ದಂತೆ ನಿಂತರು ಇವನ ಅರಿವಿಲ್ಲ. ಯಾರದು ಹೆಜ್ಜೆ ಸದ್ದಿಗೆ ಕಿವಿಗೊಟ್ಟು ಕೇಳುವಂತೆ "ಯಾಕಮ್ಮ ಇಷ್ಟು ಹೊತ್ತಿನಲ್ಲಿ ಈ ಕಡೆ ಎಲ್ಲಿ ಹೊರಟೆ...?

ನನ್ನದೇ ಗುಂಗಿನಲ್ಲಿದ್ದ ಹುಡುಗಿ ಬೆಚ್ಚಿದಳು!

"ಆಂ..!"
"ಇದೇನು ಇಷ್ಟು ಸಂಜೆ ಮೇಲೆ... ಚಿಕ್ಕ ಹುಡುಗಿ... ಒಬ್ಬಳೇ... ಈ ಕಡೆ..."

"ಯಾಕ್ರೀ?.. ಎಂಥ ಭಯ? ನಾನು ಹೋಗ್ತಿರೋದು ದೇವರ ಗುಡಿ ಪಕ್ಕದ ಹೊಳೆಯತ್ತ. ಅಲ್ಲಿ ಹನುಮ ಕಾದಿರುತ್ತಾನೆ. ಅವನ ಜೊತೆಗೆ ಇದ್ರೆ ಎಂಥಾ ಭಯಾನು ಇಲ್ಲ. ಅಂಥ ಪೈಲ್ವಾನ ಅವನು.

"ಯಾವ ಗುಡಿ...? ಎಲ್ಲಿ...?

"ನೀವು ಹೇಳೋಕೆ ಬರಬೇಡ್ರಿ...ಹನುಮ ಸತ್ತುಹೋದ. ಇನ್ನೂ ಬರೋಲ್ಲ...
ಗುಡಿ ಹಿಂದಿನ ಹೊಳೆಯಲ್ಲಿ ಮುಳುಗಿ ಪ್ರಾಣ ಬಿಟ್ಟಾಂತ.... ಅಂತ ನಂಗೆ ಕೇಳಿ-ಕೇಳಿ ಸಾಕಾಗಿ ಹೋಗಿದೆ. ನಂಗೊತ್ತು ಅವನು ಕಾದೆ ಇರ್ತಾನೆ. ಹೇಳುತ್ತಿರಲಿಲ್ವಾ? ಏಳು ಗಂಟೆಗೆ ಬಾ ಲಕ್ಷ್ಮೀ.... ಇಬ್ರೂ ಕೂಡಿ ಓಡಿ ಹೋಗೋಣ. ಮದುವೆ ಆಗೋಣ.... ಅಂತ ಅವನೆಂದು ಮಾತಿಗೆ ತಪ್ಪೋಲ್ಲ...."
ಮತ್ತೆ ಅಲ್ಲಿಂದ ಬೇಗ ಹೋಗಿ ನಡೆಯತೊಡಗಿದಳು ಕ್ಷ್ಮೀ. ಸ್ವಲ್ಪ ಹೊತ್ತಿನಲ್ಲಿ ಯಾರೋ ಕೆಟ್ಟ ಧ್ವನಿಯಲ್ಲಿ ಚೀರಿದಂತಾಯಿತು. ಅವಳು ಒಬ್ಬಳೇ ನಿಂತು ಕೂಗಿಕೊಳ್ಳುತ್ತಿದ್ದಳು.
ಬಿಡ್ರೀ.... ನಾನು ಏನು ಮಾಡಿದ್ರೂ ಬರೋಲ್ಲ... ನನ್ನ ಕೊಂದ್ರೂ ಬರೋಲ್ಲ.... ಹನುಮನ್ನ ಬಿಟ್ಟು ಬರೋಲ್ಲ...." ಯಾರೋ ಹಿಂಬಾಲಿಸುತ್ತಿರುವವರಿಂದ ತಪ್ಪಿಸಿಕೊಳ್ಳಲೋ ಎಂಬಂತೆ ಕ್ಷ್ಮೀ ಓಡತೊಡಗಿದಳು. ಅತ್ತಲೇ ನೋಡುತ್ತಿದ್ದ ರಾಜರಾಮ. ಹುಚ್ಚು ಹುಡುಗಿ! ಹನುಮ ಹೊಳೆಯಲ್ಲಿ ಮುಳುಗಿ ಸತ್ತು ಮೂರು ದಿನದ ನಂತರ ನೀರು ಕುಡಿದು ಹೆಣವಾಗಿ ತೇಲಿ ಬಂದಿದ್ದರೂ, ಇವಳಿಗೆ ಅವನು ಕಾತರದಿಂದ ಕಾದಿರುವ ಬಿಸಿ ರಕ್ತದ ಪ್ರೇಮಿ. ಆದರೆ, ಅವಳಿಗೆ ಈ ಭ್ರಮೆಯ ಆಸರೆಯಾದರೂ ಇದೆ. ತನಗೆ?

ಪಕ್ಕದಲ್ಲಿ ಯಾರೂ ಸರಿದಂತಾಗಿ ತಿರುಗಿ ನೋಡಿದರೆ ಆರಡಿಯ ಬ್ರಾಹ್ಮಣ. ಕಚ್ಚೆ ಪಂಚೆ, ಬೋಳು ತಲೆ, ಜುಟ್ಟು, ಜನಿವಾರ ,ಹಣೆಯ ತುಂಬ ವಿಭೂತಿ ಕೈ ತುಂಬಾ ಹಣ್ಣು ಮುಖದ ಮೇಲೆ ಶಾಂತ ಭಾವನೆ.

"ಸ್ವಾಮಿ"
"..."
"ಸ್ವಾಮಿ"

"ಏನಪ್ಪಾ?"
"ಏನು ಈ ಕಡೆ ಹೊರಟ್ರಾ?"
"ಹೂಂಪ್ಪಾ..."
"ಗುಡಿಗಾ..."
"ಹೌದಪ್ಪ..."
"ಏನಾದ್ರೂ ಪೂಜೆಗೆ ಕೊಟ್ಟಿದ್ರಾ?"
"ಇಲ್ಲ"
"ಇವತ್ತೇನಾದ್ರೂ ಹೆಚ್ಚುಗಟ್ಟಲೆ.... ನಾನು ಕೇಳ್ತಿರೋದು.....ಏನಾದರೂ ಬೇಡ್ಕೊಳ್ಳೋಕೆ ಹರಕೆ ಒಪ್ಪಿಸೋಕೆ...?
"ನೋಡಪ್ಪಾ ತಲೆ ಮೇಲೆ ತಲೆ ಬಿದ್ರು ನಾನು ದಿನಾ ದೇವರ ದರ್ಶನ ತಪ್ಪಿಸೋಲ್ಲ ಗುಡಿಗೆ ಹೋಗಬೇಕಾದ್ರೆ ಉತ್ಸವ ಪೂಜೆ ಇರಬೇಕಾ? ತಾಪತ್ರಯಗಳಿರಬೇಕಾ? 5ಹರಕೆಗಳಿರಬೇಕಾ? ನನ್ನ ಮನಸ್ತೃಪ್ತಿಗೋಸ್ಕರ ದಿನಾ ಗುಡಿಗೆ ಹೋಗ್ತೀನಿ ಅಷ್ಟೇ.
ಅವನನ್ನು ಪ್ರಶ್ನೆ ಕೇಳಿದ ಮೇಲೆ ರಾಜಾರಾಮನಿಗೆ ಅವಮಾನವಾದಂತಾಯಿತು. ತಾನು ಅವನಿಗಿಂತ ತುಂಬಾ ಕೆಳಸ್ತರದಲ್ಲಿರುವಂತೆ ಅನ್ನಿಸಿತ್ತು. ಅವನಲ್ಲಿ ದೃಷ್ಟಿ ನೆಟ್ಟು ಯೋಚನೆಯಲ್ಲಿ ಮುಳುಗಿ ಹೋಗಿದ್ದ ರಾಜರಾಮನಿಗೆ ಇದ್ದಕ್ಕಿದ್ದಂತೆ ತಲೆ ತಿರುಗಿದ ಹಾಗಾಯಿತು. ಎಷ್ಟು ಹೊತ್ತು ಹೀಗೆ ಕುಳಿತಿರುವುದು? ತನ್ನನ್ನು ಏಕೆ ಈ ಪ್ರಶ್ನೆ ಎಡಬಿಡದೆ ಕಾಡಬೇಕು? ಸುಗುಣ, ಚೀನಿ, ಹೋಂವರ್ಕ್, ಆಫೀಸ್, ರಾಜಕೀಯ, ಆಲೂಗಡ್ಡೆ, ಈರುಳ್ಳಿ ಹುಳಿ, ದೀಪಾವಳಿ ಬೋನಸ್, ಒನ್ ಡೇ ಕ್ರಿಕೆಟ್, ಕ್ವಾಲಿಟಿ ಐಸ್ ಕ್ರೀಮ್, ಪ್ರಾವಿಡೆಂಟ್ ಫಂಡ್, ಮನೆ ಸಾಲ, ವುಡ್ಲ್ಯಾಂಡ್ಸ್ ಮಸಾಲೆ ದೋಸೆ, ಕಿಶೋರ್ ಕುಮಾರ್, ಇಂದಿರಾ ವಿಕಾಸ ಪತ್ರ ಎಂದು ನಿರಾಳವಾಗಿ ಸಾಗುತ್ತಿದ್ದ ತನ್ನ ಬದುಕಿನ ಮಧ್ಯೆ ಇಂಥ ಪರಿಸ್ಥಿತಿ ಹೇಗಾದರೂ ಬಂತು? ಹಸಿ ಹೊಟ್ಟೆಯಲ್ಲಿ ಬಾಯಿ ಒಣಗಿಸಿಕೊಳ್ಳುತ್ತಾ ಮನೆಯಿಂದ ಮೈಲುಗಳ ಆಚೆ ಮರದ ಕೆಳಗೆ ಕಲ್ಲಿನ ಮೇಲೆ ಒಂದು ಹುಚ್ಚು ಪ್ರಶ್ನೆಗೆ ಉತ್ತರಕೋಸ್ಕರ ಕಾಯುತ್ತಿರುವ ತನ್ನ ಬಗ್ಗೆ ಅಯ್ಯೋ ಅನ್ನಿಸಿತು. ಜೊತೆಗೆ ಒಂದು ಅರ್ಥವಿಲ್ಲದ ರೋಷ ಉಕ್ಕಿಟು. ತಾನಿಂದು ಹೊರಟಿದ್ದು ಎಲ್ಲಿಗೆ?
ಮತ್ತಷ್ಟು ತಲೆ ಧೀಮ್ ಎನ್ನತೊಡಗಿತು. ಆಗ.... ದೂರದಲ್ಲಿ..... ತುಂಬಾ ದೂರದಲ್ಲಿ.... ಯಾರೋ ಒಂದು ವಿಚಿತ್ರ ರೀತಿಯ ತಮಟೆ ಬಡಿಯುತ್ತಿರುವ ಅನುಭವವಾಯಿತು. ಅದನ್ನು ಆಲಿಸಿ ಕೇಳಿದಂತೆ ನಸುಗತ್ತಲಿನಲ್ಲಿ ಧ್ವನಿ ಬಂದ ದಿಕ್ಕಿನಲ್ಲಿ ಕಣ್ಣು ಕಿರಿದುಗೊಳಿಸಿ ನೋಡಿದಂತೆ ಆ ಧ್ವನಿ ಹತ್ತಿರ ಹತ್ತಿರ ಬರುತ್ತಿರುವ ಅನುಭವ ಇದೇನು? ನಿಜವೇ? ಭ್ರಮೆಯೆ? ತನ್ನ ಹಸಿವು, ದಾಹ, ದಣಿವಿನ ಫಲವೇ? ಅಥವಾ ನಿಜವಾಗಿ ಯಾರಾದರೂ ತಮಟೆ ಬಡಿಯುತ್ತಾ ಇತ್ತ ಬರುತ್ತಿದ್ದಾರೆಯೇ? ನಿಧಾನವಾಗಿ ತಮಟೆಯ ಶಬ್ದ ಹತ್ತಿರವಾಗತೊಡಗಿತು.

ಟಮ ಟಮ ಟಮ......

ಟಮ ಟಮ ಟಮ......

ಟಮ ಟಮ ಟಮ.......

ದೂರದಲ್ಲಿ ಜನರ ಗುಂಪೊಂದು ಕಾಣತೊಡಗಿತು. ಬರಿಯ ಬಿಳಿಯ ಬಟ್ಟೆ ಗಂಡಸರು ಏನನ್ನು ಹೊತ್ತು ತರುತ್ತಿದ್ದಾರೆ ದೇವರೇ?
ಟಮ ಟಮ ಟಮ......

ಟಮ ಟಮ ಟಮ......

ಟಮ ಟಮ ಟಮ.......

ಅವರು ಹತ್ತಿರವಾದಂತೆ ಆ ಶಬ್ದ ಕಿವಿಯ ಮೇಲೆ ರಾ ಚತೊಡಗಿತು. ಎದೆ ಹೊಡೆದುಕೊಳ್ಳತೊಡಗಿತು. ಅವರು ಹೊತ್ತು ತರುತ್ತಿರುವುದೇನು? ಏನಾದರೂ.... ಹೌದು.... ತನ್ನ ಅನುಮಾನ ನಿಜ ಇದೊಂದು ಹೆಣ.

ಟಮ ಟಮ ಟಮ......

ಟಮ ಟಮ ಟಮ......

ಟಮ ಟಮ ಟಮ......

ಅವರೆಲ್ಲ ತಮಟೆ ಬಡಿಯುತ್ತಲೇ ಇವನ ಹತ್ತಿರವಾದರೂ, ಹೆಣ ಹೊತ್ತುಕೊಂಡು ಇವನ ಮುಂದೆ ಸಾಗಿ, ಇವನ ಅರಿವು ಇಲ್ಲದಂತೆ ತಮ್ಮ ಪಾಡಿಗೆ ತಾವು ದೂರ ದೂರ ಸಾಗಿದರು. ಕಾಣದಾದರು. ಇಲ್ಲವಾದರು. ಅವರು ದೂರವಾದಂತೆ ಅವನು ಅವರತ್ತಲೇ ದಿಟ್ಟಿಸುತ್ತಿದ್ದ. ಕತ್ತಲಲ್ಲಿ ಕರಗಿ ಅಳಿಸಿ ಹೋಗುವವರೆಗೂ ದಿಟ್ಟಿಸುತ್ತಲೇ ಇದ್ದ.

ಟಮ ಟಮ ಟಮ......

ಟಮ ಟಮ ಟಮ......

ಟಮ ಟಮ ಟಮ......

ಇದ್ದಕ್ಕಿದ್ದಂತೆ ರಾಜರಾಮನೆ ಎದೆ ಬಡಿತ ನಿಧಾನವಾಗಿ ತಲೆ ಹಗುರಾಯಿತು. ಸದ್ಯ... ಇವರನ್ನು ಎಲ್ಲಿಗೆ ಹೋಗುತ್ತಿದ್ದೀರಾ ಎಂಬ ಪ್ರಶ್ನೆ ಕೇಳುವ ಅವಶ್ಯಕತೆ ಇಲ್ಲವಲ್ಲ ಎಂಬ ಅರಿವು ಮೂಡಿದಂತೆ ವಿಚಿತ್ರ ಹಗುರ ಭಾವನೆ ಮೈಯೆಲ್ಲ ಆವರಿಸಿ ಹಾಯೆನಿಸತೊಡಗಿತು.
ಟಮ ಟಮ ಟಮ......

ಟಮ ಟಮ ಟಮ......

ಟಮ ಟಮ ಟಮ......




Quickies 1) What word looks the same upside down and backwards ?

Quickies 2) SAMS mother had four children. The first was named MAY. Second & Third were called JUNE & JULY respectively. What was the name of the fourth child ?

Quickies 3) Who makes has no need for it. Who buys has no use of it. Who uses it neither sees nor feel for it. What is it ?

**STEPDOWN PYRAMID**




**REBUS PUZZLE**




Stepdown

**Beginning at the top of the upside down pyramid, remove one letter from the word "strides" and rearrange the remaining letters to build a new six-letter word beneath eg. (DRIEST). Continue the same process to each word until you get to the bottom. (There may be more than one solution.) Can you find the single tutu in these watermelon slices?**




**ANSWERS TO THE LAST MONTH QUIZESS**

**Quickies 1) Water Melon. Quickies 2) A Secret Quickies 3) QUEUE: When we remove the letters "UEUE" FROM THE WORD "QUEUE " it still retains the sound of the letter "Q" which is same as the word "QUEUE".**

**WORD PUZZLE: FEET MEET HEAT FEED REED MEAT HEAR READ REAR PEAR**

**REBUS PUZZLES 1) For once in my life (four ones in my life), 2) Forget it 3) Try to understand 4) Travel overseas or overseas travel 5) Breakfast 6) Downtown 7) Eyeshadow 8) Stepfather 9) Once upon a time 10) Potatoes (pot 8 O's) 11) 3D movie 12) Top secret**

**Identify The Letters Beginning And Ending With Same Letter**

**1)Amenesia 2) Caloric 3) Divided 4) Eerie 5) Going 6) High 7) Kayak 8) Harsh 9) Maximum 10) Neon 11) Orengo 12) Refrigerator 13) Sells 14) Tarot 15) Willow 16) Xerox 17) Yearly 18) Deported 19) Medium 20) Knock 21) Window**

***Compiled by Ananth Banwasi***

# ಕರೆಯದೇ ಬರುವವರ..

✍ ಸುಮನಾ

ಅರವತ್ತರ ದಶಕದ ಒಂದು ದಿನ. ಬಾಗಿಲ ಬಳಿ ಯಾರೋ ಬೆಲ್ ಮಾಡಿದ ಸದ್ದು.. ಬಾಗಿಲು ತೆಗೆದ ಪ್ರಭಾ ಎದುರು ನಿಂತಿದ್ದ ನೆಂಟರ ಬೆಟಾಲಿಯನ್ ನೋಡಿ ಕ್ಷಣ ಕಾಲ ದಂಗಾದಳು..
ಒಳಗೆ ಕರೆಯುವುದನ್ನೂ ಮರೆತಳು. ಮನಸ್ಸು ಆಗಲೇ ಅಡಿಗೆ ಮನೆಯತ್ತ, ಹೊರಳಿತ್ತು .. ತರಕಾರಿ, ಅಕ್ಕಿ, ಬೇಳೆ ದಿವಸ ಧಾನ್ಯಗಳ ಲೆಕ್ಕಾಚಾರ ಮಾಡುತ್ತಿತ್ತು.

ಅಬ್ಬಭ್ಭಾ, ಇಷ್ಟು ಜನ ಒಟ್ಟಿಗೇ ಹೇಳದೇ ಕೇಳದೇ ಬಂದು ಗ್ಯಾಂಗ್ ಅಟ್ಯಾಕ್ ಮಾಡಿದಂತೆನಿಸಿ ಎದೆ ಬಡಿತ ಜೋರಾಗಿ, ಗರ ಬಡಿದವಳಂತೆ ನಿಂತಾಗ ಗಂಡ ರಾಮರಾವ್ ಇದೇನು ಯಾರು ಬಂದರು?? ಅಂತ.. ಪೇಪರ್ ಓದುತ್ತಿದ್ದವರು ಎದ್ದು ಬಂದು ನೋಡಿ.. ಮನಸ್ಸಿಗೆ ದೊಡ್ಡ ಆಘಾತವಾದಂತೆನಿಸಿದ್ರೂ ತೋರಿಸಿಕೊಳ್ಳದೆ ಓ.. ಹೋ.. ಬನ್ನಿ, ಬನ್ನಿ..ಇದೇನು ಸಡನ್ ಸರ್ಪ್ರೈಸ್ ಅಂತ ಒಳ ಕರೆದರು.

ನಾವೇನು ಇವರನ್ನು ಆಹ್ವಾನಿಸಿರಲಿಲ್ಲವಲ್ಲ.. ಅಂತ ಮನದಲ್ಲಿ ಅಂದುಕೊಂಡು, ಮಗಳ ಮದುವೆಗೆ ಇನ್ನೂ ಸಾಕಷ್ಟು ಸಮಯವಿದೆ.. ಆಹ್ವಾನಿಸಲೂ ಸಮಯವಿದೆಯಲ್ಲ.. ಅಂತ.. ನೋಡು ನೋಡುತ್ತಿದ್ದಂತೆ ದೊಡ್ಡ ಕುಟುಂಬದ ಯಜಮಾನ, ಯಜಮಾನಿ, ಮಕ್ಕಳು, ಮಗಳು ಅಳಿಯಂದಿರು, ಮಗ, ಸೊಸೆ ಮೊಮ್ಮಕ್ಕಳು, ಮರಿಮಕ್ಕಳು.. ಒಬ್ಬರ ಹಿಂದೆ ಒಬ್ರು ಬಂದಿದ್ದು ನೋಡಿ, ತಲೆ ಮೇಲೆ ಆಗಸ ಬಿದ್ದಂತಾಯ್ತು..ಜಂಘಾಬಲ ಉಡುಗಿದಂತಾಯ್ತು.. ದಂಪತಿಗಳಿಬ್ಬರಿಗೂ.. ಸಾಲದಕ್ಕೆ ಪೆಟ್ಸ್ ನಾಯಿ, ಬೆಕ್ಕುಗಳ ಮತ್ತೊಂದು ಬ್ಯಾಚ್..ಬೇರೆ..
ಇಷ್ಟೊಂದು ಜನಕ್ಕೆ ಹೇಗೆ ತಿಂಡಿ,ಕಾಫಿ,ಊಟ ಹೊಂದಿಸೋದು.. ಆದರೆ ಮರ್ಯಾದೆ ಪ್ರಶ್ನೆ".. ಅತಿಥಿ ದೇವೋಭವ"... ಅಂತ.. ಯಾರು ಮಾಡಿದ್ರೋ ಈ.. ವಾಕ್ಯ, ಆ ಕ್ಷಣಕ್ಕೆ ಬರೆದವನ ಕಥೆ ಮುಗಿಸಿ ಬಿಡಬೇಕೆನ್ನುವಷ್ಟು ಕೆಂಡಾಮಂಡಲ ಕೋಪ.. ಯಾವುದೂ ತೊರಿಸಿಕೊಳ್ಳುವಂತಿಲ್ಲ, ಮುಖದ ಮೇಲೆ ಸಮಾಧಾನ,ಮುಗುಳ್ನಗೆ ಮೂಡಿಸಿ ಉಭಯ..ಕುಶಲೋಪರಿ ಮಾತನಾಡುತ್ತಾ.. ಕೂತುಕೊಳ್ಳಲು ತಿಳಿಸಿದರು..

ಹಿರಿಯರು ಸೋಫಾ, ಕುರ್ಚಿ ಆಕ್ರಮಿಸಿಕೊಂಡರು ಮಕ್ಕಳಿಗೆ ಚಾಪೆಯೇ ಗತಿ ಆಯ್ತು. ನಾಯಿಗಳ, ಬೊಗಳುವಿಕೆ, ಪುಸಿ ಕ್ಯಾಟ್ ಗಳ ಮಿಯಾವ್ ಶಬ್ದಕ್ಕೆ ಅಕ್ಕ ಪಕ್ಕದವರು ಬಂದು, ಓ ಯಾರೋ ದೊಡ್ಡ ಮನುಷ್ಯರು ಬಂದಿದಾರೆ, ಕಾರುಗಳು ಬೇರೆ ಇವೆ ಅಂದುಕೊಂಡರು.. ಅವರ ಡಿಟೆಕ್ಟಿವ್ ಕೆಲಸ ಕಂಟಿನ್ಯೂ ಮಾಡಿದರು.. ರಾಮರಾಯರ ಮನೆಗೆ ಬಂದ ಜನಗಳಿಗೆ ಪುಣ್ಯಕ್ಕೆ ಅಂದು ನೀರಿನ ತೊಂದರೆ ಇಲ್ಲದ್ದರಿಂದ ಬಾತ್ ರೂಮ್ ಉಪಯೋಗಕ್ಕೆ ಸಮಸ್ಯೆ ಆಗಲಿಲ್ಲ. ಮನೆ ಮುಂದೆ ನಿಲ್ಲಿಸಿದ್ದ ದೊಡ್ಡ ಎರಡು ಕಾರುಗಳನ್ನು ನೋಡಿ.. ಹ್ಞೂ...ಇನ್ನು ಈಗ ಅವರ ಸೂಟ್ ಕೇಸ್, ಬ್ಯಾಗುಗಳನ್ನು ತರ್ತಾರೇನೋ ಅಂತ ಎದುರು ನೋಡ್ತಿದ್ದರು.. ರಾಮರಾಯರು.. ಗಂಡ, ಹೆಂಡತಿ ಕಣ್ಸನ್ನೆಯಲ್ಲಿ ಆಗಲೇ ಗಹನ ಚರ್ಚೆ ನಡೆಸಿದರು. ಕೂತು ಕೊಳ್ಳಿ, ಏ ಪ್ರಭಾ.. ಕಾಫಿ ಮಾಡೇ ಎಲ್ಲರಿಗೂ..ಅಂತ ಹೇಳಿದಾಗ ಹ್ಞೂ..ಮಾಡ್ತೀನಿ,ಹಾಲಿನ ಪ್ಯಾಕೆಟ್ ತರಬೇಕು ಅಂತ ಸನ್ನೆ ಮಾಡಿ ತೋರಿದಳು ಪ್ರಭಾ.. ಅತಿಥಿಗಳಲ್ಲಿದ್ದ ಹಿರಿಯಪ್ಪ ಅಂದರು, ಹ್ಞೂ..ಹಾಲಿನ ಪ್ಯಾಕೆಟ್ ತರಕಾರಿ, ಹಣ್ಣು, ಹಂಪಲು,ಊಟದೆಲೆ,ತಿಂಡಿ ಎಲೆ, ದಿನಸಿ ಎಲ್ಲಾ ತೊಗೊಂಡು ಬನ್ನಿ..ನಮಗೆಲ್ಲಾ ತಿಂಡಿ, ಊಟ ಆಗಬೇಕಲ್ಲಾ ಅಂದ್ರು.. ಆಗಲಿ, ಆಗಲಿ.. ನಮಗೆ ಒಂದು ಗಂಟೆ ಕಾಲಾವಕಾಶ ಕೊಡಿ ಇಬ್ಬರೂ ಸೇರಿ "ಅತಿಥಿ ಸೇವೆ" ಮಾಡ್ತೀವಿ ಅಂದ್ರು..ರಾಮರಾವ್.. ಮನದಲ್ಲಿ ಕುದಿಯುವ ಆಕ್ರೋಶ ,ಇಷ್ಟು ಸಡನ್ನಾಗಿ ಬಂದು ವಕ್ಕರಿಸೋ ಬದಲು ಒಂದು ಪೋಸ್ಟ್ ಕಾರ್ಡ್ ಹಾಕಬಹುದಿತ್ತು..ಇನ್ನೂ ಏನೇನೋ ಆಲೋಚನೆ ಗಳು.. ಸರಿ, ಕೂತು ಕೊಳ್ಳಿ..ಈಗ ಬರ್ತೀನಿ ಅಂತ ಕೈಯಲ್ಲಿ ಎರಡು, ಮೂರು ಬ್ಯಾಗ್ ಹೆಗಲಿಗೇರಿಸಿ..ಚಪ್ಪಲಿ ಮೆಟ್ಟಿ ಇನ್ನೇನು ಹೊರಡಬೇಕು ಎಂದಾಗ.. ಹಿರಿಯಪ್ಪ ಬಂದು ಕೈ ಹಿಡಿದು, ಅರೇ, ಬನ್ನಿ.. ಬನ್ನಿ ನೀವು ಎಲ್ಲೂ ಹೋಗಬೇಕಿಲ್ಲ, ಏನೂ ಮಾಡಬೇಕಿಲ್ಲ.. ಮನೆಯಿಂದ ತಿಂಡಿ, ಅಡಿಗೆ..ಇತ್ಯಾದಿ ನಾವೇ ತಂದಿದ್ದೇವೆ, ನಿಮ್ಮ ಕುಟುಂಬದ ಎಲ್ಲರಿಗೂ ಇವತ್ತು ನಮ್ಮದೇ ಟ್ರೀಟ್.. ಇದು ನಿಮಗೆ ನಮ್ಮ ಸರ್ಪ್ರೈಸ್..ಹೋಗ್ರಪ್ಪಾ ರವಿ, ವಿಶು. ಕಾರಿನಿಂದ ತಿಂಡಿ, ಊಟದ ಬ್ಯಾಗ್ ತೊಗೊಂಡು ಬನ್ನಿ..

ಅಂದಾಗ ಗಂಡ, ಹೆಂಡತಿ ಇಬ್ಬರಿಗೂ ಬೆಟ್ಟದಂಥ ಕಷ್ಟ ಹತ್ತಿಯಂತೆ ಕರಗಿತ್ತು.. ಮನೆ ದೇವರಿಗೆ ಹಣ್ಣು,ಕಾಯಿ ಪೂಜೆ ಮಾಡ್ತೀನಿ ಅಂತ ಪ್ರಭಾ ಮನದಲ್ಲಿ ಆ ದೇವರಿಗೆ ಕೃತಜ್ಞತೆ ಅರ್ಪಿಸಿದ್ರು.. ಹಿರಿಯರು ಮುಂದೆ ಮಾತನಾಡುತ್ತಾ ಅಂದ್ರು.. ಮೊನ್ನೆ ಮಕ್ಕಳೆಲ್ಲಾ ರಜಕ್ಕೆ ಅಂತ ಬಂದಿದ್ದರು .. ಇಲ್ಲಿಂದ ಇಪ್ಪತ್ತು ಮೈಲಿ ದೂರದಲ್ಲಿರುವ ದೊಡ್ಡ ಅಭಯ ಆಂಜನೇಯನ ದೇವಸ್ಥಾನ ನೋಡೋಣವೆಂದು ಸಡನ್ನಾಗಿ ಹೊರಟೆವು., ನಾಳೆ ಅಲ್ಲಿ ವಿಳ್ಳೆದಲೆ ಅಲಂಕಾರ ಇದೆಯಂತೆ, ನೋಡಲು ಎರಡು ಕಣ್ಣು ಸಾಲದು ಅಂತ ಫ್ರೆಂಡ್ಸ್ ಹೇಳಿದ್ರು,,ನಾವೂ ನಮ್ಮ ತೋಟದ ಹಣ್ಣು ಗಳ ನೈವೇದ್ಯಕ್ಕೆ ಕೊಡಮಾಡುತ್ತಿದ್ದೇವೆ. ಹೋಗುವ ದಾರಿ ಹೀಗೇ ಅಲ್ವಾ.

ಅಂತ ನಿಮ್ಮನ್ನು ನೋಡಿಕೊಂಡು ಹೋಗೋಣವೆಂದು ಬಂದೆವು. ಧಿಡೀರ್ ಅಂತ ಬಂದು ಗಾಭರಿಗೊಳಿದ್ದಕ್ಕೆ ಕ್ಷಮಿಸಿ. ನಾವು ಅಭ್ಯಾಗತರೂ ಆಗಿ ಬಿಟ್ಟೆವು. ಅಮಂತ್ರಣ ಇಲ್ಲದೇ ಬರಬಾರದು ಎನ್ನುವುದು ನಮಗೂ ತಿಳಿದ ವಿಷಯವೇ.. ಅದೇನೋ ಅಂತಾರಲ್ಲ.."ಕರೆಯದೇ ಬರುವವರ....ಕರೆದು ಕೆರದಲ್ಲಿ ಹೊಡೆದಂತೆ ಸರ್ವಜ್ಞ "ಅನ್ನುವ ವಚನದಂತೆ.. ಅಂದಾಗ ಎಲ್ಲರಿಗೂ ನಗು ತಡೆಯಲಾಗಲಿಲ್ಲ..ಕಾಫಿ ಈಗ ಬರುವ ಮುನ್ನ ತಾನೇ ಆಗಿದೆ..ಹ್ಞೂ...ಬನ್ನಿ, ಬನ್ನಿ ಈಗ ಎಲ್ಲರೂ ಕೂಡಿ ತಿಂಡಿ ತಿನ್ನೋಣ, ಹುಳಿ ಅವಲಕ್ಕಿ, ಕೇಸರಿಬಾತ್ ತಂದಿದೇವೆ,ಊಟಕ್ಕೆ ಕಲೆಸಿದನ್ನ, ಚಿತ್ರಾನ್ನ, ಮೊಸರನ್ನ,ಕ್ಯಾರೆಟ್ ಹಲ್ವ, ಬಾದೂಷ, ಖಾರಾಸೇವೆ, ಚಿಪ್ಸ್ ಎಲ್ಲಾ ತಂದಿದೀವಿ ..ಎಲ್ಲಾ ಕೂಡಿ, ನಗುತ್ತಾ ಕಾಲ ಕಳೆಯುತ್ತಾ ತಿನ್ನೋಣ..ನಿಮ್ಮನ್ನೂ ಕರೆದೊಯ್ಯಲು ಪ್ಲಾನ್ ಮಾಡಿದ್ದೆವು ಆದ್ರೆ ನೀವು ಹೇಳಿದ್ರಲ್ಲಾ ನಾಳೆಯಿಂದ ಮನೆ ರಿಪೇರಿ ಕೆಲಸ ಇದೇ ಅಂತ..ಅದಕ್ಕೇ ನಿಮ್ಮನ್ನು ಆಹ್ವಾನಿಸಲಿಲ್ಲ,ತಪ್ಪು ತಿಳಿಯಬೇಡಿ.. ಹಾಗೇ ಸ್ವಲ್ಪ ರೆಸ್ಟ್ ತೊಗೊಂಡು ನಿಮ್ಮ ಜೊತೆ ನಾವೂ ಊಟ ಮಾಡಿ ಹೊರಡುತ್ತೇವೆ ಅಂದಾಗ ಕಾಣದ ದೇವರಿಗೆ ಕೈ ಮುಗಿದರು ಪ್ರಭಾ, ರಾಮರಾವ್ ದಂಪತಿಗಳು..

# ಬೇಕು

ನೇಸರು ವರದಿ

'ಬೇಕು ಬೇಕು. ಎನ್ನುವ ಹಂಬಲ ಹಲವರಲ್ಲಿ ಇಂಗುವುದೇ ಇಲ್ಲ. "ನನಗೆ ನೆಮ್ಮದಿ ಇಲ್ಲ", "ನನಗೆ ದುಡ್ಡು ಕಾಸಿಲ್ಲ", "ನನಗೆ ಹೊಸ ಮನೆ ಇಲ್ಲ", "ನನಗೆ ಒಳ್ಳೆ ಗಂಡನಿಲ್ಲ" ಎಂಬ 'ಇಲ್ಲ' ಹಾಡಿನಿಂದ ನನಗೆ "ಅದು ಬೇಕು", "ಇದು ಬೇಕು" ಎಂಬ ಕೊನೆಗೆ ನೂಕುವವರೇ ಇಂದು ನಮ್ಮ ನಾಡಿನಲ್ಲಿ ಹೆಚ್ಚಾಗಿದ್ದಾರೆ.

"ನಿನಗೆ ಹೊಸ ಮನೆ ಏಕೆ ಬೇಕು? ಇರುವುದೇ ಚೆನ್ನಾಗಿದೆಯಲ್ಲ" ಎಂದು ಹೇಳಿದರೆ "ಇಲ್ಲ ಈ ಮನೆಯಲ್ಲಿ ಬೇರೆ ಮಂದಿ ಬಂದು ಕೂರುವಂತ ಒಂದು ಪಾರ್ಟಿ ಮಾಡುವ ಹಾಲ್ ಇಲ್ಲ, ತಾರಸಿ ಇಲ್ಲ ನನಗೆ ಹಸಿರು ಗಿಡಗಳು ಇಷ್ಟ. "ಅದನ್ನಿಡಲು ಜಾಗವೇ ಇಲ್ಲ" ಎಂಬ ಬೇಕಿನ ಕೂಗು ಕೇಳಿ ಬರುತ್ತದೆ. 'ಒಳ್ಳೆ ಗಂಡ' ಎಂದರೇನು? 'ಒಂದು ಹೊತ್ತು ಮನೆಯಲ್ಲಿ ಕೂತು ಮಕ್ಕಳೊಡನೆ ಮಾತಾಡುವ, ಆಡುವ ಪುರುಸೊತ್ತು ಇಲ್ಲದಿದ್ದರೆ ಎಂತಹ ಗಂಡ' ಎಂದು ಮುಖಂಡರಿಸುವುದು ಕಂಡು ಬರುತ್ತದೆ. "ಅಲ್ಲಮ್ಮ ನೀನು ಮಕ್ಕಳನ್ನು ಇಂಟರ್ ನ್ಯಾಷನಲ್ ಸ್ಕೂಲ್ ಗೆ ಸೇರಿಸಿ ಅವರಿಗೆ 4 ಲಕ್ಷ ಕಟ್ಟಬೇಡವೇ? ಮನೆಯಲ್ಲಿ ಕೂತರೆ ಹೇಗೆ ಎಂದರೆ, ಮುಖ ತಿರುವಿ 'ಅದನ್ನೆಲ್ಲ ಮಾಡಬಾರದು ಎನ್ನುತ್ತೀರಾ?' ಮಕ್ಕಳು ಓದಿದರೆ ತಾನೆ ಮುಂದುವರೆಯುವುದು ಎಂದು ಹುಬ್ಬೇರಿಸುತ್ತಾರೆ. ಹೀಗೆ ಬೇಕು ಎನ್ನುವವರು ಕೇವಲ ಹೆಣ್ಣುಗಳಷ್ಟೆ ಅಲ್ಲ. ನನಗೆ ಈ ಕೆಲಸದಿಂದ ಸಾಕಷ್ಟು ಬರುತ್ತಿಲ್ಲ, ನನ್ನ ಗೆಳೆಯರೆಲ್ಲ ಎಷ್ಟೊಂದು ಗಳಿಸುತ್ತಿದ್ದಾರೆ. ಎಷ್ಟೊಂದು ಮಜಾ ಮಾಡುತ್ತಿದ್ದಾರೆ. ನನಗೆ ಸಾಲದು. "ಅಲ್ಲಪ್ಪ ಅವರ ಕೆಲಸ ಬೇರೆ, ನಿನ್ನ ಕೆಲಸ ಬೇರೆ, ಅವರು ಓದಿದ್ದು ಬೇರೆ, ನೀನು ಓದಿದ್ದು ಬೇರೆ, ಅಲ್ಲವೇ? ಎಂದರೆ ಅವರು ಬೇರೆ ಓದಿದ್ದರೆ ಏನಾಯ್ತು ನನ್ನ ಸಮಾನಕ್ಕೆ ಅವರಿಲ್ಲ. ಅವರಂತಹ ಕೆಲಸ ನನಗೆ ಬೇಕು. ಅಂತಹ ಕಾರು ನನಗೆ ಬೇಕು ಅಂತಹ ಮೊಬೈಲು ನನಗೆ ಬೇಕು ನಾನು ಹೇಳಿದಂತೆ ಕೇಳುವಂತಹ ಹೆಂಡತಿ ಬೇಕು. ಅಲ್ಲಪ್ಪಾ ಈಗ ಹೆಣ್ಣು ಮಕ್ಕಳು ಕಲಿತು ದುಡಿಯುತ್ತಾರಲ್ಲ. ನೀನು ಹೇಳಿದ ಹಾಗೆ ಅವಳ್ಯಾಕೆ ಕೇಳಬೇಕು? ಎನ್ನುವ ಪ್ರಶ್ನೆಗೆ ಮುಖ ತಿರುವಿ, ನಿನಗೇನು ಗೊತ್ತು ಎಂದು ನಿಲ್ಲುವ ಗಂಡುಗಳೆಷ್ಟು?

ಈ "ಬೇಕು "ಎಂಬ ಕೂಗನ್ನು ನಾವು ಮಕ್ಕಳಿಗೆ ಕಲಿಸಿ ಬಿಟ್ಟಿರುತ್ತೇವೆ. ಏನು ಕೊಟ್ಟರೂ ಕೂಡ 'ನನಗೆ ಅದು ಬೇಕು' ಎಂಬ ಅಳುವಿನ ಕೂಗು ಕೇಳುತ್ತಲೇ ಇರುತ್ತದೆ. ಮಕ್ಕಳಿಗೆ ನಾವು ನನಗಿರುವುದು ಸಾಕು ಎಂದು ಕಲಿಸುವವರೆಗೂ ನಮ್ಮ ಬಾಳಿಗೆ ನೆಮ್ಮದಿ ಸಿಗುವುದಿಲ್ಲ. ಈ ಬೇಕು ಎಂಬುದೇ ಒಬ್ಬ ರಾಜ, ಇನ್ನೊಂದು ರಾಜ್ಯದ ಮೇಲೆ ದಾಳಿ ಮಾಡಿ ಜಾಗವನ್ನು ತನ್ನ ವಶಪಡಿಸಿಕೊಳ್ಳುವುದಕ್ಕೆ ಕಾರಣ. ಎಲ್ಲಿಯವರೆಗೆ ಈ ಬೇಕು ಎಂಬ ಕೂಗಿಗೆ ಬ್ರೇಕ್ ಹಾಕುವುದನ್ನು ಕಲಿಯುವುದಿಲ್ಲವೋ ಅಲ್ಲಿಯವರೆಗೆ ಈ ಯುದ್ಧ ಜಗಳ ಕದನ ಮುಗಿಯುವುದಿಲ್ಲ. ಸಾಕಪ್ಪಾ ಸಾಕು, ಈ ಬೇಕು ಕೂಗು.

# ಶಿವು

(ನೇಸರು ಜಾಗತಿಕ ಸಣ್ಣಕಥೆ ಸ್ಪರ್ಧೆಗೆ ಬಂದ ಕಥೆ)

✍ ಕಲಾ ಭಾಗ್ವತ್

ಬೆಳಗಿನ ಜಾವ ಐದು ಗಂಟೆ. ಸಹ್ಯಾದ್ರಿಯ ಪಾದದಲ್ಲಿರುವ ಪುಟ್ಟ ಗ್ರಾಮದ ಜನತಾ ಮನೆಯ ಸುಣ್ಣ ಬಳಿದ ಗೋಡೆಗೆ ತೂಗುಹಾಕಿದ ಗಡಿಯಾರ ಢಣ್ ಢಣ್ ಎಂದು ಬಡಿದುಕೊಳ್ಳಲಾರಂಭಿಸಿತು. ಊರಿನ ಸಿವಿಲ್ ಎಂಜಿನಿಯರ್ ಸುಧಾಕರ ನಾಯ್ಕರ ಮಗಳು ಡಿಗ್ರಿ ಮುಗಿದು ಪಟ್ಟಣದಲ್ಲಿ ನೌಕರಿಗೆ ಸೇರಿದ್ದಳು. ಅವರು ಮನೆಯನ್ನು ಮಾರಿ ಪಟ್ಟಣದಲ್ಲಿ ಮೂರಂತಸ್ತಿನ ಬಂಗಲೆಗೆ ಶಿಫ್ಟ್ ಆಗುವಾಗ ಹಳೆಯ ಸಾಮಾನು ಎಂದು ಬಿಟ್ಟು ಹೋದ ಗಡಿಯಾರವದು. ಆತ್ಮೀಯತೆಯನ್ನು ಹಂಬಲಿಸಲೋ ಎನ್ನುವಂತೆ ಅದನ್ನು ತಂದು ಮನೆಯಲ್ಲಿ ಇಟ್ಟಿದ್ದ.

ಎಂಬತ್ತು ವರ್ಷದ ಮಂಕಾಳಿ ಆಗಲೇ ಚಹಾಕ್ಕೆ ಇಟ್ಟಿದ್ದಳು. ಊದುಗೊಳವೆಯ ಮೂಲಕ ಹೊರಬೀಳುತ್ತಿದ್ದ ಅವಳ ದಮ್ಮಿನುಸಿರು ಬುಸ್ ಎಂದು ಒಲೆಯಲ್ಲಿ ಹೊಗೆ ಎಬ್ಬಿಸುತ್ತಿತ್ತು. ಒಲೆಯ ಬೂದಿ ಅವಳ ಬಿಳಿಯ ತಲೆಗೂದಲನ್ನು ಆವರಿಸಿತ್ತು. ಆಗಲೇ ಕಪ್ಪುಗಟ್ಟಿದ ಅಲ್ಯೂಮಿನಿಯಂ ಬೋಗುಣಿ ಹೊಗೆಯಲ್ಲಿ ಮುಚ್ಚಿಹೋಗಿತ್ತು.

ಗಡಿಯಾರದ ಘಂಟೆಗೆ ಏನೋ ಉತ್ಸಾಹ. ಶಿವು ಹೊದ್ದುಕೊಂಡಿದ್ದ ಅಜ್ಜಿಯ ಸೀರೆಯನ್ನು ಒದ್ದು ಥಟ್ಟನೆ ಎದ್ದು ಕುಳಿತವ ಕನಸಿನಿಂದ ಹೊರಬಂದ ಸರದಾರನಂತಿದ್ದ. ಅವನ ಒದೆತದ ರಭಸಕ್ಕೆ ಹಳೆಯ ಹತ್ತಿಬಟ್ಟೆಯ ಸೀರೆ ಬರ್ರಂದು ಹರಿದಿತ್ತು. ಸುಕ್ಕಾದ ಮೈಮೇಲೊಮ್ಮೆ ಕೈಯಾಡಿಸಿದ. ಚಾಪೆ ಮಡಚಿ, ಮಾಡಿಗೆ ತಗಲಾಡುತ್ತಿದ್ದ ಜೋಡಿ ಹಗ್ಗಕ್ಕೆ ಸಿಕ್ಕಿಸಿದ. ಅಂಗಳಕ್ಕೆ ಹೋಗಿ, ನುಜ್ಜಾದ ಅಲ್ಯೂಮಿನಿಯಂ ಚರಿಗೆಯ ತಳದಲ್ಲಿರುವ ನೀರನ್ನು ಬಿಂದಿಗೆಗೆ ಸುರಿದು ಮುಖ ತೊಳೆದ. ಅದರ ತಳದ ರಂದ್ರಕ್ಕೆ ಅಂಟಿಸಿರುವ ಡಾಂಬರು ಸರಿಯಾಗಿದೆಯೇ ಎಂದು ಪರೀಕ್ಷಿಸಿದ. ಪಕ್ಕದಲ್ಲಿಯೇ ಇರುವ ಚಿಕ್ಕಪ್ಪನ ಮನೆಯ ಬಾವಿಯಿಂದ ನೀರನ್ನು ಸೇದಿ ಅದರಲ್ಲಿ ತುಂಬಿಸಿದ. ಅಜ್ಜಿಯ ಅಡಿಗೆಗೂ ಇಟ್ಟ. ಅಷ್ಟರಲ್ಲಿ ಅವಳ ಚಹಾ ನೀರು ತಯಾರಾಗಿತ್ತು. ದಮ್ಮಿನಿಂದ ತಡವರಿಸುತ್ತಿದ್ದ ಆಕೆಯ ಶ್ವಾಸದಿಂದ ಹೊರಬರುವ' ಸುಂಯ್' ಎನ್ನುವ ಧ್ವನಿ ಶಿವುಗೆ ಸಹಿಸಲಾಗದು. ತನ್ನ ಚಹಾದ ಅರ್ಧ ಭಾಗವನ್ನು ಅಜ್ಜಿಯ ಲೋಟಕ್ಕೇ ಸುರಿದ. ಛಾವಣಿಗೆ ಸಿಕ್ಕಿಸಿಟ್ಟ ಮುರಿದ ಹಲ್ಲಿನ ಬಾಚಣಿಕೆಯಿಂದ ಅಜ್ಜಿಯ ತಲೆ ಬಾಚಿದ. ದಿನವೂ ಇದಾದ ನಂತರವೇ ತಂಬಿಗೆ ಹಿಡಿದು ಗೋವೆ ಹಕ್ಕಲಿನ ಕಡೆಗೆ ಆತ ಹೊರಡುವುದು.

ಮಂಕಾಳಿ ಎಲೆ ಅಡಿಕೆ ಕುಟ್ಟುತ್ತಿದ್ದಳು.'ನಾನಿರುವಷ್ಟು ದಿನ ಈ ಪೋರನ ಬಗ್ಗೆ ನಿಗಾ ವಹಿಸುವೆ. ಇಲ್ಲಿಂದ ಕಾಲ್ತೆಗೆದ ಬಳೀಕೆ ಇವನನ್ನು ಯಾರು ನೋಡುವರೋ.. ನಾಲ್ಕಕ್ಷರ ಕಲಿಸಿದ್ದರೆ ಹೇಗಾದರೂ ಹೊಟ್ಟೆ ಹೊರೆದುಕೊಳ್ತಿದ್ದ. ಮನೆ ಅಳೀತನಕ್ಕೆ ಬಂದ ಅಳಿಯ, ಹೆಂಡ ಕುಡ್ದ ಮತ್ನಲ್ಲಿ ನನ್ನ ಮಗಳನ್ನು ಅನಾಯಾಸವಾಗಿ ಕೆನ್ನೆ ಮೇಲೆ ಹೊಡ್ದು ಸಾಯ್ಸಿ ಬಿಟ್ಟ. ಹೋಗ್ಲಿ ಅವನಾದರೂ ಉಳ್ಕಂಡ್ನಾ..?ಕಾಲು ಬಂದ ಮಗೀನ ನನ್ನ ಮಡ್ಲಲ್ಲಿ ವಗ್ದು ಇಲ್ಲಿಂದ ಕಾಲ್ತೆಗ್ದ. ಅವನ ಚಿಕ್ಕಪ್ಪಂಗೆ ಯಾಕ್ ಬೇಕು ನಮ್ಮ ಉಸಾಬರಿ?.ಅವ್ನ ಮಕ್ಕಳೀಗೆಲ್ಲ ಕಲಸ್ವಾ.ಮಗಳು ಅಳಿಯನ ಕಳಕೊಂಡು ನನ್ನ ಬುದ್ದಿನೂ ಮಂಕಾಗಿತ್ತು ಆಗ.ವಯಸ್ಸಾದ್ರೂ ಬುದ್ದಿ ಬೆಳೀಲಿಲ್ಲ ಇದಕ್ಕೆ. ಯಾವುದಾರೂ ದೇವ್ರು ಕಣ್ಣು ತೆಗ್ದ್ರಾ.. ಇಷ್ಟು ವರ್ಸಾ ಕಾದೆ. ಈ ಮುದ್ಕಿ ಮನ್ಸು ಯಾರಿಗೆ ಅರ್ಥ ಆಗ್ತದೆ?'ಅಜ್ಜಿಯ ಮನದಲ್ಲಿ ಎಸರು ಕುದಿಯುತ್ತಿತ್ತು.

ಗೋವೆ ಹಕ್ಕಲಿನಿಂದ ಬಂದ ಶಿವು ಮಧ್ಯಾಹ್ನದ ಊಟದ ಗಂಜಿಗೆ ಅಕ್ಕಿಯನ್ನು ಅಳೆದಿಟ್ಟ. ಪಾತ್ರೆ ತೊಳೆಯುವ ನೀರು ಇಂಗುವ ಜಾಗದಲ್ಲಿ ಹುಲುಸಾಗಿ ಬೆಳೆದ ಬಸಳೆಯ ಎರಡು ದಂಟನ್ನು ಕತ್ತರಿಸಿದ. ಪುಟ್ಟ ಡಬ್ಬಿಯಲ್ಲಿ ತುಂಬಿಸಿಟ್ಟ ನಾಲ್ಕೈದು ಒಣ ಮೀನನ್ನು ಅದರ ಜೊತೆಯಲ್ಲಿಟ್ಟ. ಅಷ್ಟರಲ್ಲಿ ಬೆಳಕು ಹರಿದಿತ್ತು. ಅಜ್ಜಿ ಇದನ್ನೆಲ್ಲ ಗಮನಿಸುತ್ತಿದ್ದಳು. 'ರೇಷನ್ ಅಕ್ಕಿ ಮುಗಿದಿದೆ ಮಗಾ.. ನಾಳಿನ ಊಟಕ್ಕೆ ತಂದಿಡಬೇಕು' ಎಂದಳು. ತಕ್ಷಣವೇ ಶಿವು ಕೋಣೆಯ ಮೂಲೆಯಲ್ಲಿ ಭದ್ರವಾಗಿ ಬೀಗ ಜಡಿದಿಟ್ಟ ಪುಟ್ಟ ಟ್ರುಂಕನ್ನೂ, ಗೋಡೆಯ ಮೊಳೆಗೆ ಸಿಕ್ಕಿಸಿಟ್ಟ ಕೀಲಿಕೈಯನ್ನೂ ಅವಳ ಮುಂದಿಟ್ಟ. ಮಂಕಾಳಿ ನಿಧಾನವಾಗಿ ಟ್ರುಂಕಿನಲ್ಲಿರುವ ಬಿ.ಪಿ.ಎಲ್ ಕಾರ್ಡನ್ನು ಒಂದು ಪ್ಲಾಸ್ಟಿಕ್ ಕೊಟ್ಟೆಯಲ್ಲಿ ಇಟ್ಟು ಅದನ್ನು ಮಡಚಿ, ಚೀಲಕ್ಕೆ ಹಾಕಿ ಶಿವುನ ಕೈಗೆ ಕೊಟ್ಟಳು. ಚಿಕ್ಕ ಬಾಚಣಿಕೆಯಿಂದ ಕ್ರೋಪ್ ಬಾಚುತ್ತ'ಅನಿಸುತಿದೆ ಯಾಕೊ ಇಂದು...'ಹಾಡನ್ನು ಗುನುಗುತ್ತಾ ಬದಿಯಲ್ಲಿರುವ ಚಿಕ್ಕಪ್ಪನ ಮನೆಯ ಕಡೆ ಹೊರಟ. ಅವರ ಮನೆಯ ಜಗುಲಿಯ ತುದಿಯಲ್ಲಿ ಇಟ್ಟ ಬಾಳೆಗೊನೆ, ವೀಳ್ಯದೆಲೆಯ ಕಟ್ಟು ಇಂಥವೇ ಕೆಲವು ಸಾಮಾನುಗಳನ್ನು ಅಲ್ಲಿದ್ದ ಚೀಲದಲ್ಲಿ ತುಂಬಿಸಿದ. ಅದನ್ನು ಮನೆಯಿಂದ ಸ್ವಲ್ಪವೇ ದೂರದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರುವ ಗೂಡಂಗಡಿಗೆ ತಲುಪಿಸುವುದು ಅವನ ನಿತ್ಯದ ಚಾಕರಿ.

ಅಂಗಡಿಗೆ ಸ್ವಲ್ಪವೇ ದೂರದಲ್ಲಿ ಗಿರಿಜಮ್ಮನ ಮನೆ. ಅವಳ ಇಬ್ಬರು ಗಂಡುಮಕ್ಕಳು ಅಮೆರಿಕದಲ್ಲಿ ಉದ್ಯೋಗದಲ್ಲಿ ಇರುವವರು. ಗಂಡ ನಿವೃತ್ತ ಪೋಸ್ಟ್ ಮಾಸ್ಟರ್ ಒಳ್ಳೆಯ ಸ್ಥಿತಿವಂತರು ಗಿರಿಜಮ್ಮ.ಆದರೂ ಐಷಾರಾಮಿ ಜೀವನ ನಡೆಸಿದವರಲ್ಲ. ಮದುವೆಯಾಗಿ ಬಂದಾಗಿನಿಂದ ಮನೆಯವರಿಗಾಗಿ ದುಡಿದು ಬಸವಳಿದ ಜೀವ. ಮಕ್ಕಳ ಸಂಪಾದನೆಯನ್ನು ಎಂದೂ ಆಶಿಸಿದವರಲ್ಲ. ಬಹಳ ಚುರುಕು ಸ್ವಭಾವದವರು. ಗಂಡನ ಮಟ್ಟಿಗೆ ಮಾತ್ರ ಕುಕ್ಕುತ್ತಲೇ ಇರುವ ಕೋಳಿ ಆಕೆ. ಬೆಳಗಾಗುತ್ತಲೇ ಮನೆಯ ಹಿಂದಿರುವ ತೋಟದಲ್ಲೆಲ್ಲಾ ಸುತ್ತಾಡಿ, ಮರಗಿಡಗಳನ್ನು ಮಾತನಾಡಿಸಿ ನೀರು ಬಾರಿ ಮಾಡಿ ಬರುವರು. ಅಂತಹ ಕೆಲಸದಲ್ಲಿ ಸೌಖ್ಯ, ಉಳಿತಾಯ ಎರಡೂ ಎಂದು ಯೋಚಿಸುವವರು. ತನ್ನ ಕೈಲಾಗುವ ಕೆಲಸವನ್ನು ಆಳು ಕಾಳುಗಳಿಗೆ ದಮ್ಮಯ್ಯಾ ಎಂದು ಮಾಡಿಸುವವರಲ್ಲ. ಹೆದ್ದಾರಿಯ ಪಕ್ಕದಲ್ಲಿಯೇ ಇರುವ ಮನೆಯ ಹೊರಾಂಗಣದಲ್ಲಿ ಸ್ವಲ್ಪ ಹೊತ್ತು ಕುಳಿತು, ಹೋಗಿ ಬರುವವರನ್ನೆಲ್ಲಾ ನೋಡಿ ಮಾತನಾಡಿಸಿದರಷ್ಟೇ ಸಮಾಧಾನ ಗಿರಿಜಮ್ಮನಿಗೆ. ದಿನವೂ ಶಿವು ಬರುವುದನ್ನು ದೂರದಿಂದಲೇ ಗಮನಿಸುವರು. ಹಿಂದಿನ ದಿನದ ಅಳಿದುಳಿದ ತಿಂಡಿಯನ್ನು ಬಾಳೆ ಎಲೆಯಲ್ಲಿ ತೆಗೆದಿಡುವರು. ಹೆಸರಿಗೆಂಬಂತೆ ಹಾಲು ಬೆರೆಸಿ ಚಹಾ ಮಾಡುವರು. ರಜೆಯಲ್ಲಿ ಮಕ್ಕಳೆಲ್ಲ ಮನೆಗೆ ಬಂದಾಗ ಬಿಸಿಬಿಸಿ ದೋಸೆ, ರುಚಿರುಚಿ ಕಜ್ಜಾಯ ತಯಾರಾದರೂ ಶಿವುನ ಪಾಲಿಗೆ ಮಾತ್ರ ಇದೇ ಉಪಹಾರ.

ಶಿವುಗೆ ಅವನ ಬರ್ಮುಡಾದ ಮೇಲೆ ಬಹಳ ಕಾಳಜಿ. ಗಿರಿಜಮ್ಮನ ಮನೆಯ ಗೇಟಿನ ಸಣ್ಣ ಬಾಗಿಲಿನಲ್ಲಿ ಕಾಲನ್ನು ತುಸುವಷ್ಟೇ ಮೇಲೆತ್ತಿ ಈಚೆಗೆ ದಾಟಿದ ಮೇಲೆ ಗಂಭೀರ ನಡಿಗೆ. ನೇರವಾಗಿ ಮನೆಯ ಹಿಂಬದಿಗೆ ಹೋಗಿ ಅಲ್ಲಿರುವ ತೆಂಗಿನಕಾಯಿಯ ರಾಶಿಯಿಂದ ಐದನ್ನು ಆರಿಸಿ, ಸಿಪ್ಪೆ ಸುಲಿದು ಜಗುಲಿಯ ಮೇಲಿಟ್ಟು ನಿಲ್ಲುತ್ತಿದ್ದ. ಅಷ್ಟರಲ್ಲಿಯೇ ಗಿರಿಜಮ್ಮ,'ಉಫ್... ಉಫ್ ಈ ಹಾಳು ಇರುವೆ ಕಾಟ'ಎನ್ನುತ್ತ ಮುತ್ತಿದ ಇರುವೆಯನ್ನು ಹಾರಿಸುತ್ತ ಹೊರಬರುವರು. ಹೊರ ಜಗುಲಿಯ ಮೆಟ್ಟಿಲಿನ ತುದಿಯಲ್ಲಿ ಕುಳಿತು ಉಪಹಾರ ಸೇವಿಸುವುದು ಶಿವುಗೆ ರೂಢಿ. ಆಗ ಗಿರಿಜಮ್ಮ ಕೇಳುವ ಹತ್ತು ಪ್ರಶ್ನೆಗಳಲ್ಲಿ ಹೆಚ್ಚೆಂದರೆ ಎರಡಕ್ಕೆ ಮಾತ್ರ ಅವನಿಂದ ಉತ್ತರ ಸಿಗುತ್ತಿತ್ತು. ಗಿರಿಜಮ್ಮ ಮಾತ್ರ ಮಾತನಾಡುವುದನ್ನು ನಿಲ್ಲಿಸುವುದಿಲ್ಲ.! ಶಿವು ಎಲ್ಲದಕ್ಕೂ ತಲೆಯಲ್ಲಾಡಿಸುತ್ತಿದ್ದ.ಗಿರಿಜಮ್ಮನ ಪತಿ ತಾವು ತಿನ್ನುವಾಗ ಒಂದು ಭಾಗವನ್ನು ಬಾಳೆಯಲ್ಲಿ ಕಟ್ಟಿ ಶಿವು ಗೆ ಕೊಡಲೆಂದು ದಿನವೂ ಅಡಗಿಸಿಟ್ಟುಕೊಳ್ಳುವರು.ಶಿವು ಹೊರಡುವಾಗ ಆಚೀಚೆ ನೋಡುತ್ತಾ 'ತಗೋ..ಬೇಗನೆ ಕಿಸೆಗೆ ಹಾಕು' ಎಂದು ಕೊಡುತ್ತಿದ್ದರು.

ಶಿವು ಕಣ್ಣು ಮಿಟುಕಿಸುತ್ತಾ ಬಿಸಿಯಾದ ಚಹಾವನ್ನು 'ಸೊರ್..' ಎಂದು ಕುಡಿಯುವಾಗ ಅವನ ದೃಷ್ಟಿ, ಗಿರಿಜಮ್ಮನ ಮನೆಯ ಕಾಂಪೌಂಡಿನ ಪಕ್ಕದಲ್ಲಿರುವ ವಿಶಾಲವಾದ ಹಸಿರು ಗದ್ದೆಯ ಕಡೆ ದಿನವೂ ವಿಹರಿಸುತ್ತಿತ್ತು. ಆ ತುದಿಯ ಗದ್ದೆಯಲ್ಲಿ ಯಶೋದೆ ಮಗುವಿನೊಂದಿಗೆ ಬೆವರು ಸುರಿಸುವುದನ್ನು ನೋಡುವಾಗ, ಹೋಗಿ ಸಹಾಯ ಮಾಡಬೇಕೆಸುತ್ತಿತ್ತು ಅವನಿಗೆ. ಸೂರ್ಯನ ಎಳೆ ಕಿರಣಗಳ ಜೊತೆಯಲ್ಲಿ ತಂಪಾದ ಗಾಳಿ ಏನೋ ಒಂದು ಬಗೆಯ ಸಂಭ್ರಮವನ್ನು ಹಿಗ್ಗಿಸುತಿತ್ತು. ಮೌನದಲ್ಲೇ ಅವನ ಮನಸ್ಸು ಮಾತನಾಡುತ್ತಿತ್ತು. ಆದರೆ ಎಲ್ಲವೂ ಗೋಜಲು ಗೋಜಲು.

ಗೊಂಚಲು ಈರುಳ್ಳಿ ಆಗ ಮಾತ್ರವೇ ಮೊಳೆತು, ಗದ್ದೆಯ ತುಂಬೆಲ್ಲ ಹಸಿರು ಹೊರಬರುತ್ತಿತ್ತು. ಬಯಲು, ನೋಡಲು ವಿಶಾಲವಾಗಿದ್ದರೂ ಅದರಲ್ಲಿರುವುದು ಊರಿನ ರೈತರ ಜೀವರಸ ತುಂಬಿದ ತುಂಡು ಗದ್ದೆಗಳು. ಸಮುದ್ರದ ಅಂಚಿನ ನೀರಿನ ಸೆಲೆಯಿರುವ ಬಯಲು ಅದು. ಎಲ್ಲರಿಗೂ ಸೇರಿ ಒಂದು ತಾತ್ಪೂರ್ತಿಕ ಐದು ಫೂಟ್ ಆಳದ ಬಾವಿ. ಬೆಣಚು ಹಾಯುವಷ್ಟರಲ್ಲಿ ಎಲ್ಲರೂ ಅವರವರ ಗದ್ದೆಗಳಿಗೆ ನೀರುಣಿಸಿ ಕೆಲಸಕ್ಕೆ ಹೊರಡುತ್ತಿದ್ದರು.

ಯಶೋಧೆಗೆ ಗಂಡ ಬಿಟ್ಟುಹೋದ ಗೂಡಂಗಡಿಯ ಜೊತೆಯಲ್ಲಿ ತುಂಡು ಗದ್ದೆಯನ್ನೂ ನಿಭಾಯಿಸಬೇಕಿತ್ತು. ಅವಳ ಮಾವ ಕೊನೆಯುಸಿರೆಳೆದು ಆಗಲೇ ಮೂರು ವರ್ಷಗಳಾಗಿದ್ದವು. ಮಾವನ ಅಪ್ಪನ ಕಾಲದಿಂದಲೂ ಮಂಕಾಳಿಗೆ ತಿಂಗಳಿಗೆ ಸ್ವಲ್ಪ ಸಾಮಾನುಗಳನ್ನು ಉದಾರವಾಗಿ ಕೊಡುವ ಪದ್ಧತಿ ಇತ್ತು. ಯಾಕೆ ಏನು ಎಂಬ ಕಾರಣವನ್ನು ಯಾರೂ ಕೇಳಲಿಲ್ಲ. ಅದನ್ನೇ ಯಶೋದೆಯೂ ಮುಂದುವರಿಸಿದ್ದಳು.

ದಿನವೂ ಬೆಳಿಗ್ಗೆ ಅಂಗಡಿಯ ಸುತ್ತಲಿನ ಜಾಗವನ್ನೆಲ್ಲಾ ಸ್ವಚ್ಛಗೊಳಿಸಿ ಪುಟ್ಟ ಮಗುವನ್ನು ಕಂಕುಳಿಗೆ ಏರಿಸಿ ಗದ್ದೆಗೆ ಬರುವಾಗ ಅವಳಿಗೆ ಎಂಟು ಗಂಟೆಯಾಗುತ್ತಿತ್ತು. ಕಳೆದ ವರ್ಷ ಇದೇ ಸಮಯದಲ್ಲಿ ತನ್ನ ಗಂಡನ ಜೊತೆಯಲ್ಲಿ ಪಿಸು ಮಾತನಾಡುತ್ತಾ ಹಲವು ಬಗೆಯ ಕುಚೋದ್ಯ ಗಳೊಂದಿಗೆ ಈರುಳ್ಳಿ ಬೆಳೆಗೆ ನೀರುಣಿಸುತ್ತಿದ್ದ ಆ ಜಾಗ ಅವಳ ನೋವಿಗೆ ಸ್ಪಂದಿಸುವಂತಿತ್ತು. ಕೆಲಸ ಮುಗಿದ ಮೇಲೂ ಸ್ವಲ್ಪ ಹೊತ್ತು ಮಗುವಿನ ಜೊತೆ ಗೋಣಿಯ ಮೇಲೆ ಕುಳಿತು, ಅವನ ನೆನಪಲ್ಲಿ ಮೈಮರೆಯುತ್ತಿದ್ದಳು.ಶೂನ್ಯವನ್ನು ದಿಟ್ಟಿಸುತ್ತಾ ಊರಿನ ಚಪಲ ಕಣ್ಣುಗಳ ಇರಿತದಿಂದ ತಪ್ಪಿಸಿಕೊಳ್ಳುವ ಉಪಾಯವನ್ನು ಹುಡುಕುತ್ತಿದ್ದಳು

ಶಿವು ದಿನವೂ ಮಗುವಿನೊಂದಿಗೆ ತುಸು ಆಡಿದಂತೆ ಮಾಡಿ ನಗು ನಗುತ್ತ ಗದ್ದೆಯ ಗುಂಟವೇ ಮನೆಗೆ ಮರಳುತ್ತಿದ್ದ. 'ತಾನು ನೋಡಿದರೂ ಆತನೆಂದೂ ಕಣ್ಣೆತ್ತಿ ನೋಡಿದವನಲ್ಲ. ಬಹು ನಾಚಿಕೆಯ ಸ್ವಭಾವ ಅವನದು, ಪಾಪದವ'ಎಂದುಕೊಳ್ಳುತ್ತಿದ್ದಳು ಯಶೋದೆ. ಅದೇ ಆಕೆಗೆ ಇಷ್ಟವಾಯಿತೇನೋ..

ಆ ದಿನ ಶಿವು ಪೋಸ್ಟ್ ಮಾಸ್ಟರ್ ಕೊಟ್ಟ ತಿಂಡಿಯನ್ನು ಅಜ್ಜಿಯೆದುರಿಗೆ ಬಿಡಿಸಿಟ್ಟ. ಮನೆಯ ಹೊರಗೆ ಕುಳಿತು ಕೋಗಿಲೆಯ ಕೂಗನ್ನು ಅನುಕರಿಸಿ ಆಹ್ಲಾದಿಸುತ್ತಿದ್ದ. ಸಾರಿಗೆಂದು ಸುಲಿಯಲು ತಂದ ಈರುಳ್ಳಿಯ ಒಂದೊಂದು ಪೊರೆ ಕಳಚಿದ ಹಾಗೆ ಅದರ ಚಂದ ಹೆಚ್ಚುತ್ತಿತ್ತು. ಅದರ ಕೇಂದ್ರದಲ್ಲಿ ಇರುವ ಶುಭ್ರ ಭಾಗ ಅವನಿಗೆ ಮುದ ನೀಡುತ್ತಿತ್ತು. ಆದಿನ ರೇಷನ್ ಅಂಗಡಿಗೆ ಹೋಗಿ ಬರಲೂ ಮರೆತಿದ್ದ.

ತಡವಾದರೂ ಹೋಗಲೇ ಬೇಕಾಗಿತ್ತು. ರೇಷನ್ ಅಕ್ಕಿಯಲ್ಲಿ ಸ್ವಲ್ಪವನ್ನು ಗೂಡಂಗಡಿಗೆ ಮಾರಿ ಅದೇ ಹಣದಲ್ಲಿ ಒಣ ಮೀನು ಕೊಂಡು ಹೋಗಬೇಕೆಂದುಕೊಂಡಿದ್ದ. ಆ ಕ್ಷಣ ಏನನ್ನೋ ಹೇಳುವ ಹವಣಿಕೆ ಅವಳಲ್ಲಿ..

ಮರುದಿನ ಬಾಳೆಗೊನೆ ಇಡಲು ಬಂದಾಗ ಅವನ ಕಣ್ಣನ್ನೇ ದೃಷ್ಟಿಸಿದಳು ಯಶೋದೆ. ಶಿವು ಪೇರಳೆ ಮರದಲ್ಲಿ 'ಅಲ್ಲೊಂದು ಹಣ್ಣಾಗಿದೆ ನೋಡು' ಎಂದು ತೋರಿಸುತ್ತಿದ್ದ.'ಬರಿಯ ಪೆದ್ದು' ಎಂದಾಗ ಪೆದ್ದಾಗಿಯೇ ನಕ್ಕಿದ್ದ..

ಮರುದಿನ ಎಂದಿನಂತೆಯೇ ಗದ್ದೆಗೆ ಬರುವಾಗ ಯಶೋದೆ ಗಿರಿಜಮ್ಮನ ಮನೆಯತ್ತ ಬಂದಳು. ಏನಾದರೂ ವಿಶೇಷವಿದ್ದರೆ ಮಾತ್ರ ಅವಳು ಮನೆಗೆ ಬರುವುದು ಗಿರಿಜಮ್ಮಂಗೆ ತಿಳಿದದ್ದೆ. ಅವಳಿಗೆ ಏನಾದರು ನೆರವು ನೀಡುವುದು ಅವರಿಗೂ ಖುಷಿಯೇ. ಆ ದಿನ ಯಶೋದೆ ತನ್ನ ಮನದ ಮಾತನ್ನು ಗಿರಿಜಮ್ಮನ ಹತ್ತಿರ ಅಳುಕುತ್ತಲೇ ಹೇಳಿದ್ದಳು.

'ಕೇಳಿದಿರಾ.. ನಾಳೆ ನಾವು ಶಿವುನ ಅಜ್ಜಿಯನ್ನು ಮಾತನಾಡಿಸಲು ಹೋಗುತ್ತಿದ್ದೇವೆ'. ಗಿರಿಜಮ್ಮ ಗಂಡನನ್ನು ಕರೆದು ಹೇಳುವ ರೀತಿಯಲ್ಲೇ ಯಶೋದೆಗೆ ಅವರ ಸಹಮತ ಕಾಣುತ್ತಿತ್ತು. ಪೋಸ್ಟ್ ಮಾಸ್ಟ್ರು ಅಪರೂಪಕ್ಕೊಮ್ಮೆ ತಮ್ಮ ಹೆಂಡತಿಗೆ 'ಶಹಬ್ಬಾಸ್'ಎಂದಿದ್ದರು. ಅಂಗಳದ ತುದಿಯ ಮರೆಯಲ್ಲಿ ಬಾಡುತ್ತಿದ್ದ ಎರಡು ಅಬ್ಬಲಿಗೆ ಗಿಡಗಳಿಗೆ ಮುಷ್ಟಿಯಲ್ಲಿ ಕೆಂಪು ಮಣ್ಣು ಹಾಗೂ ನೀರೆರೆದಿದ್ದಳು ಯಶೋದೆ.

ತನ್ನ ಗಂಡನಿಗಾಗಿ ಆ ದುರಂತದ ದಿನವೇ ತಂದಿದ್ದ ಬರ್ಮುಡಾ ಚಡ್ಡಿ ಹಾಗೂ ಟೀ ಶರ್ಟ್ ಶಿವುನ ಕೈಯಲ್ಲಿಡಬೇಕೆಂದುಕೊಂಡಿದ್ದಳು. ಶಿವುನ ಕಣ್ಣಲ್ಲಿ ಸೂರ್ಯನ ಕಿರಣಗಳು ಪ್ರತಿಫಲಿಸುವುದನ್ನು ನೋಡಬೇಕೆನಿಸಿತ್ತು.. ಅವಳಿಗರಿವಿಲ್ಲದಂತೇ ಕೈಗಂಟಿದ ಕೆಂಪು ಮಣ್ಣಿನ ಬೊಟ್ಟು ಅವಳ ಹಣೆಯಲ್ಲಿತ್ತು. ಪುಟ್ಟ ಮಗು ಅಂಗಳದಲ್ಲಿ ಕುಳಿತು ಆಕಾಶದಲ್ಲಿ ಹಾರಾಡುವ ಜೋಡಿ ಹಕ್ಕಿಯನ್ನು ನೋಡಿ ಕೇಕೆ ಹಾಕುತ್ತಿತ್ತು.

# ಗಮಕಿಯ ದೃಷ್ಟಿಯಲ್ಲಿ ಗದಾಯುದ್ಧ



✍ **ಡಾ. ಜಿ. ಎನ್. ಉಪಾಧ್ಯ**

ರನ್ನನ **ಗದಾಯುದ್ಧಂ**
ವ್ಯಾಖ್ಯಾನ ಸಹಿತ
ವ್ಯಾಖ್ಯಾನಕಾರರು: ಡಾ. ಎಂ.ಎ. ಜಯರಾಮ ರಾವ್
ವೀರಲೋಕ ಬುಕ್ಸ್, ಬೆಂಗಳೂರು
ಮೊಬೈಲ್ : 7022122121
ಬೆಲೆ ರೂ. 350/-
ವರ್ಷ : 2022, ಪುಟಗಳು : 304

ಹತ್ತನೆಯ ಶತಮಾನದ ಪ್ರಮುಖ ಕನ್ನಡ ಕವಿಗಳಲ್ಲಿ ರನ್ನನದು ಎದ್ದು ಕಾಣುವ ಹೆಸರು. ರತ್ನತ್ರಯರಲ್ಲಿ ಒಬ್ಬನಾದ ಆತ ಶಕ್ತಿಕವಿ ಎಂಬ ಖ್ಯಾತಿಗೂ ಭಾಜನನಾಗಿದ್ದಾನೆ. ಕವಿಚಕ್ರವರ್ತಿ ಬಿರುದಾಂಕಿತ ಕವಿ ರನ್ನನ 'ಗದಾಯುದ್ಧ' ಒಂದು ಅಭಿಜಾತ ಕೃತಿ. ಇದೊಂದು ಅನರ್ಘ್ಯ ಕೃತಿ ರತ್ನವೂ ಹೌದು. ಪಂಪನ 'ವಿಕ್ರಮಾರ್ಜುನ ವಿಜಯ'ದ ಹಾಗೆ ರನ್ನನ 'ಗದಾಯುದ್ಧ' ಅಥವಾ 'ಸಾಹಸಭೀಮ ವಿಜಯ' ಸಹ ಒಂದು ಚಿರನೂತನ ಮಹಾಕಾವ್ಯ.




ಈ ಗದಾಯುದ್ಧ ಕಾವ್ಯವನ್ನು ಗಮಕದ ಹಿನ್ನೆಲೆಯಲ್ಲಿ ವ್ಯಾಖ್ಯಾನ ಸಹಿತ ಅರ್ಥ ವಿವರಣೆಯೊಂದಿಗೆ ಹೊರತಂದ ಶ್ರೇಯಸ್ಸು ಖ್ಯಾತ ಕಲಾವಿದ ಗಮಕ ವಿದ್ವಾನ್ ಎಂ.ಎ. ಜಯರಾಮ ರಾವ್ ಅವರಿಗೆ ಸಲ್ಲುತ್ತದೆ. ಪ್ರಾಚೀನ ಕನ್ನಡ ಕಾವ್ಯ ಪರಂಪರೆ ಕೇಳುವುದಕ್ಕೆ ಆದ್ಯತೆ ನೀಡಿತ್ತು. ನಾವಿಂದು ಓದುಗ ಕೇಂದ್ರಿತ ಸಂದರ್ಭದಲ್ಲಿದ್ದೇವೆ. ಹಳಗನ್ನಡ ಕಾವ್ಯವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಗಮಕಿಗಳ ಪಾತ್ರ ದೊಡ್ಡದಾಗಿತ್ತು. ಗಮಕ ಕಲೆ ಕರ್ನಾಟಕದಲ್ಲಿಯೂ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಿತ್ತೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಕರ್ನಾಟಕದ ಗಮಕ ಕಲಾವಿದರಲ್ಲಿ ಜಯರಾಮ ರಾವ್ ಅವರದು ದೊಡ್ಡ ಹೆಸರು ಹಾಗೂ ಮಹತ್ವದ ಸಾಧನೆ. ಅವರು ಸಂಗೀತ ವಿದ್ವಾಂಸರೂ ಆಗಿದ್ದಾರೆ. ಕನ್ನಡ ಕವಿಗಳ ಕಾವ್ಯದ ಹಿರಿಮೆ ಗರಿಮೆಯನ್ನು ಅವರು ಗಮಕ ಕಲೆಯ ಮೂಲಕ ನಾಡಿಗೆ ಉಣಬಡಿಸುತ್ತಾ ಬಂದ ಪ್ರತಿಭಾ ಸಂಪನ್ನ ವಿದ್ವಾಂಸರು. ಅವರು ಬರೇ ಗಮಕಿ ಮಾತ್ರವಲ್ಲ; ಅತ್ಯುತ್ತಮ ವ್ಯಾಖ್ಯಾನಕಾರರು. 'ಮಹಾಭಾರತದ ಕರ್ಣ' ಎಂಬ ಮಹತ್ವದ ಶೋಧ ಕೃತಿಯನ್ನು ರಚಿಸಿದ ಸೂಕ್ಷ್ಮಮತಿಯ ಚಿಂತಕರೂ ಆಗಿದ್ದಾರೆ. ಇದೀಗ ಜಯರಾಮ ರಾವ್ ಅವರು ರನ್ನ ವಿರಚಿತ ಮೇರು ಕಾವ್ಯ 'ಗದಾಯುದ್ಧಂ' ಕೃತಿಯನ್ನು ವ್ಯಾಖ್ಯಾನ ಸಹಿತ ಪ್ರಕಟಿಸಿರುವುದು ಒಂದು ಅಪೂರ್ವ ಸಾಧನೆ. ರನ್ನನ ಮಹಾಕಾವ್ಯದ ಸಾಹಿತ್ಯ ಸಂಗೀತ ಲಯ ಲಹರಿಗಳನ್ನು ಸೊಗಸಾಗಿ ವಿವರಿಸಿರುವುದು ಈ ಕೃತಿಯ ಹೆಚ್ಚುಗಾರಿಕೆ. ಜಯರಾಮ ರಾವ್ ಅವರು ಕಳೆದ ಅನೇಕ ದಶಕಗಳಿಂದ ಗಮಕ ಕಲೆಯ ಮೂಲಕ ದೇಶದ ಎಲ್ಲೆಡೆ ಸಹೃದಯರ ಮನಸೂರೆಗೊಂಡ ಪ್ರತಿಭಾ ಸಂಪನ್ನ ಕಲಾವಿದರು. ರನ್ನನ ಗದಾಯುದ್ಧ ಅವರಿಗೆ ಮುಖೋದ್ಗತ. ಅದನ್ನು ವಾಚನ ವ್ಯಾಖ್ಯಾನ ಮಾಡುತ್ತಾ ಬಂದಿದ್ದಾರೆ. ಇದೀಗ ಗದಾಯುದ್ಧ ಕಾವ್ಯಕ್ಕೆ ಸೂಕ್ತವಾದ ವ್ಯಾಖ್ಯಾನ ಬರೆದು ಹೀಗೂ ಹಳಗನ್ನಡ ಕೃತಿಯೊಂದನ್ನು ನೋಡಲು ಸಾಧ್ಯ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಮಹಾಕಾವ್ಯವೊಂದನ್ನು ಗಮಕಿಯೊಬ್ಬರು ಭಿನ್ನಪರಿಯಲ್ಲಿ ಅರ್ಥ ವಿವರಣೆ ನೀಡಿರುವ ಗುರುತರ ಪ್ರಯತ್ನ ಇದಾಗಿದೆ.

ಗಮಕ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ರೀತಿಯ ಛಾಪು ಮೂಡಿಸಿ ನಡುಗನ್ನಡ ಕಾವ್ಯಗಳಲ್ಲದೆ ಹಳಗನ್ನಡ ಕವಿಗಳ ಕೃತಿಗಳ ಸಾರಸತ್ವಗಳನ್ನು ಕಳೆದ ಆರು ದಶಕಗಳಿಂದ ಅರ್ಥೈಸುತ್ತಾ ಬಂದ ಬಹುಮುಖ ಪ್ರತಿಭೆಯ ವಿದ್ವಾಂಸರು ಜಯರಾಮ ರಾವ್. ತನ್ನದೇ ಆದ ಲಾಂಛನ ಪ್ರಭೆ, ವ್ಯಕ್ತಿ ವಿಶೇಷ, ಸ್ವೋಪಜ್ಞತೆಗಳಿಂದ ಹೊಳೆಯುವ ಕವಿ ಮಹಾಕವಿ ರನ್ನ ತನ್ನ ಅಪ್ರತಿಮ ಪ್ರೌಢಿಮೆಯಿಂದ ಉತ್ಕೃಷ್ಟವಾದ ಕಾವ್ಯವನ್ನು ಸಾರಸ್ವತ ಲೋಕಕ್ಕೆ ನೀಡುವಲ್ಲಿ ಯಶಸ್ವಿಯಾದವನು. 'ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ' ಎಂಬ ಅವನ ಮಾತಿನಲ್ಲಿ ಅತ್ಯುಕ್ತಿಯಿಲ್ಲ. ರಸಭಾವಗಳ

ಔಚಿತ್ಯವನ್ನು ಅವುಗಳ ಅನ್ಯೋನ್ಯತೆಯನ್ನು ತಿಳಿದು ಕವಿಮಾರ್ಗವನ್ನು ಕಿಂಚಿತ್ತೂ ಬಿಡದೆ ಅತ್ಯಂತ ಮನೋಜ್ಞವಾದ ಕಾವ್ಯವನ್ನು ರಚಿಸಿದ ರನ್ನನ ಸಾಮರ್ಥ್ಯವನ್ನು ಇಲ್ಲಿ ಅಷ್ಟೇ ಸೊಗಸಾಗಿ ಬೆಳಕಿಗೆ ಹಿಡಿಯಲಾಗಿದೆ. 'ಕವಿಯು ತನ್ನ ಕಾವ್ಯ ಶರೀರವನ್ನು ಶಬ್ದಮೂರ್ತಿಯಲ್ಲಿ ಎರಕ ಹೊಯ್ದಿಡಬಲ್ಲವನಾದರೆ ಆ ಮೂರ್ತಿಗೆ ಉಸಿರೂದಿ ಜೀವಕಳೆ ತುಂಬಿ ಸಚೇತನಗೊಳಿಸುವ ಕಲೆ, ಗಮಕ ಕಲೆ. ಮಹಾಕಾವ್ಯಗಳ ರುಚಿ ಸವಿಯಬೇಕಾದರೆ ಗಮಕಿಗಳ ಪಾತ್ರ ಬಹು ಮಹತ್ವವಾದುದು' ಎಂಬುದಾಗಿ ಕವಿ ದ. ರಾ. ಬೇಂದ್ರೆ ಅವರು ಹೇಳಿರುವ ಮಾತಿನಲ್ಲಿ ತಥ್ಯವಿದೆ. ಜಯರಾಮ ರಾವ್ ಅವರ ಅರ್ಥ ವಿವರಣೆ, ವ್ಯಾಖ್ಯಾನ ರನ್ನನ ಮಹಾಕಾವ್ಯಕ್ಕೆ ಮತ್ತಷ್ಟು ಮೆರುಗನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಅರ್ಥ ಪ್ರತೀತಿ ಕೆಡದ ಹಾಗೆ ಪದವಿಂಗಡಣೆ, ವಿವರಣೆ, ಅಗತ್ಯ ಕಂಡಲ್ಲಿ ಸಣ್ಣ ಟಿಪ್ಪಣಿಗಳನ್ನು ನೀಡಿರುವುದು ಔಚಿತ್ಯಪೂರ್ಣ ಉಪಕ್ರಮ. ಈ ವ್ಯಾಖ್ಯಾನದ ಮೂಲಕ ಜನಸಾಮಾನ್ಯರೂ ಸಹ ರನ್ನನ ಕಾವ್ಯವನ್ನು ಓದಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿದೆ. ಬೆಳ್ವೊಲ ಮತ್ತು ಪುಲಿಗೆರೆಯ ಆರು ನೂರು ಗ್ರಾಮಗಳ ಸುತ್ತಮುತ್ತಲಿನ ಪರಿಸರದ ವಾಡಿಕೆಯ ಆಡುಭಾಷೆ, ದೇಸಿಯನ್ನು ತಿರುಳ್ಗನ್ನಡವನ್ನು ತಾನು ಈ ಕಾವ್ಯದಲ್ಲಿ ಬಳಸಿರುವುದಾಗಿ ಹೇಳಿಕೊಂಡಿದ್ದಾನೆ. ಅಲ್ಲಿ ಸಂಸ್ಕೃತವೂ ಹಿತಮಿತವಾಗಿ ಬಳಕೆಯಾಗಿದೆ. 'ಶ್ರುತರಮಣೀಯನೆ ಕವಿತಾ। ಚತುರನೆ ಚಾರಿತ್ರಮಣಿ ವಿಭೂಷಣ ರತ್ನಂ। ಶ್ರುತ ರಮಣೀಯನೆ ಕವಿತಾ।ಚತುರನೆ ಚಾರಿತ್ರ ರತ್ನ ಜಲಧಿಯರತ್ನಂ' ಈ ಪದ್ಯಕ್ಕೆ ರಾವ್ ಅವರು ಕೊಡುವ ವಿವರಣೆ ಹೀಗಿದೆ;

ಕವಿರತ್ನ ಎಂದೆಲ್ಲ ಬಿರುದಾಂಕಿತನಾದ ರನ್ನ ನಿಜಕ್ಕೂ ಶಾಸ್ತ್ರಜ್ಞಾನಕೋವಿದನೇ? ಕವಿತಾ ರಚನಾ ಚಾತುರ್ಯವುಳ್ಳವನೇ? ಎಂಬೆಲ್ಲ ಪ್ರಶ್ನೆಗಳಿಗೆ ಅವನೇ ಉತ್ತರವಿತ್ತಿದ್ದಾನೆ. ಉತ್ತಮಶೀಲವೆಂಬ ರತ್ನದಿಂದ ಶೋಭಿತನಾದ ಕವಿರತ್ನ ನಿಜಕ್ಕೂ ಶಾಸ್ತ್ರಜ್ಞಾನ ಸಂಪನ್ನ! ಕವಿತಾ ರಚನಾ ಸಾಮರ್ಥ್ಯವುಳ್ಳವನೆಂಬುದರಲ್ಲಿ ಅನುಮಾನವೇ ಇಲ್ಲ. ಆತ ಸಾಮಾನ್ಯ ರತ್ನವಲ್ಲ. ಶೀಲವೆಂಬ ರತ್ನ ಸಮುದ್ರದಲ್ಲಿ ಹುಟ್ಟಿದ ಅನರ್ಘ್ಯ ರತ್ನವೇ ಸರಿ! (ಇಲ್ಲಿ ಈ ಪದ್ಯದ ಪೂರ್ವಾರ್ಧ (ಮೊದಲ ಎರಡು ಸಾಲು) ಪ್ರಶ್ನಾರ್ಥರೂಪವಾಗಿದ್ದರೆ–ಉತ್ತರಾರ್ಧ (ಕೊನೆ ಎರಡು ಸಾಲು) ಉತ್ತರ ರೂಪದಲ್ಲಿದೆ).

ರನ್ನ ಬಳಸಿದ ಪದನಿಧಿ ಪದ ಸಂಪತ್ತು ನಮ್ಮನ್ನು ಬೆರಗುಗೊಳಿಸುತ್ತದೆ. ವಾಕ್ ಶ್ರೀಯುತ=ವಿದ್ವಾಂಸ, ನಿರಸ್ತಮಿತ=ಸೋಲಿಸಿ ಓಡಿಸಿದ ಕಬರಿಭರಂ–ಕಪ್ಪಾದ ಕೂದಲರಾಶಿ, ಸಂಗರರಂಗ=ಯುದ್ಧ ರಂಗ, ಜೀವಾಕರ್ಷಣ= ಪ್ರಾಣಸೆಳೆಯುವ, ವಿಭಾಸಿ=ಪ್ರಕಾಶಿಸುವ, ಮೂಲೋನ್ಮೂಲನ=ಬೇರು ಸಹಿತ ಕೀಳು, ಧರ್ಮರುಚಿ=ಧರ್ಮಾಸಕ್ತ, ಅಲಂಪು=ಅತಿಶಯವಾದ ಪ್ರೇಮ, ವಾಕ್+ಜಲ=ಮಾತಿನ ಧಾರೆ, ದರಹಾಸ=ಮುಗುಳುನಗೆ, ಅಜಾಂಡ= ಬ್ರಹ್ಮಾಂಡ, ಸೈಪು=ಪುಣ್ಯ, ತಾಟಿಸು=ಬಾರಿಸು, ಕಸವರ ಗಲಿ=ಅಕ್ಕಸಾಲಿಗ ಹೀಗೆ ವಿಶಿಷ್ಟ ಭಾಷಾ ಸೊಗಡು, ಅಲ್ಲಿನ ಶೈಲಿ ಇವನ್ನೆಲ್ಲ ಮುನ್ನೆಲೆಗೆ ತಂದು ಅಲ್ಲಲ್ಲಿ ತೌಲನಿಕವಾಗಿ ವ್ಯಾಖ್ಯಾನ ನೀಡಿರುವುದು ಮೆಚ್ಚತಕ್ಕ ಸಂಗತಿ. ಉದಾಹರಣೆಗೆ:

ಆರವಮಂ ನಿರ್ಜಿತ ಕಂ
ಠೀರವರವಮಂ ನಿರಸ್ತಘನರವಮಂ ಕೋ।
ಪಾರುಣ ನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ ॥

ರವಮಂ=ಧ್ವನಿಯನ್ನು, ನಿರ್ಜಿತ=ಜಯಿಸಿದ; ಕಂಠೀರವ=ಸಿಂಹ; ನಿರಸ್ತ=ಹೊರದೂಡಿದ; ಘನ=ಮೋಡದ (ಮೊಳಗು); ಕೋಪ+ ಅರುಣ+ನೇತ್ರ=ಕೋಪದಿಂದ ಕೆಂಪಾದ ಕಣ್ಣು; ಉರಗ ಪತಾಕ=ಸರ್ಪಧ್ವಜ–ದುರ್ಯೋಧನ; ಬೆಮರ್ತನ್= ಬೆವರಿದನು.

ಸಿಂಹಧ್ವನಿ (ಗರ್ಜನೆ)ಯನ್ನು ಜಯಿಸಿದ, ಮೋಡದಿಂದ ಹೊರದಬ್ಬಿದ ಗುಡುಗಿನ ಮೊಳಗನ್ನೂ ಮೀರಿಸಿದ ಭೀಮನ ಆರ್ಭಟವನ್ನು ಕೋಪದಿಂದ ಕೆಂಪಾದ ಕಣ್ಣುಗಳುಳ್ಳ ದುರ್ಯೋಧನನು ಕೇಳಿ ಆ ತಣ್ಣನೆಯ ನೀರಿನೊಳಗೂ ಬೆವರಿದನಂತೆ – ಇಲ್ಲಿ 'ಉರಗ ಪತಾಕ' ಎಂಬ ಪದ ಪ್ರಯೋಗ ಅರ್ಥಪೂರ್ಣವಾಗಿದೆ. ಸರ್ಪಮತ್ಸರಕ್ಕೆ ಎರಕ ಹೊಯ್ದಂತಿದೆ.

ಗಮಕ ಕ್ಷೇತ್ರದಲ್ಲಿ ಆರೂವರೆ ದಶಕಗಳ ಸುದೀರ್ಘವಾದ ಅನುಭವವನ್ನು ಹೊಂದಿರುವ ಜಯರಾಮ ರಾವ್ ಅವರು ಈ ಹೊಸ ಉಪಕ್ರಮದ ಮೂಲಕ ಮಹಾಕವಿ ರನ್ನನನ್ನು ಕನ್ನಡಿಗರ ಮನೆಮನಕ್ಕೆ ಮುಟ್ಟಿಸುವ ಪ್ರಯತ್ನವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಕನ್ನಡ ವಾಙ್ಮಯದಲ್ಲಿ ಇದೊಂದು ವಿರಳ ಸಾಧನೆ. ಕನ್ನಡ ಸಾಹಿತ್ಯಕ್ಕೆ ಇದೊಂದು ಮೌಲಿಕ ಸೇರ್ಪಡೆ. ಈ ಕೃತಿಯನ್ನು ಸೊಗಸಾಗಿ ಪ್ರಕಟಿಸಿದ ವೀರಲೋಕ ಬುಕ್ಸ್‌ನ ಮಿತ್ರರೂ ಅಭಿನಂದನಾರ್ಹರು.

# ‘ಅಮೂಲ್ಯ’ ತ್ರೈಮಾಸಿಕ – ಬೆಳ್ಳಿ ಹಬ್ಬದ ಪ್ರಯುಕ್ತ ಸಾಹಿತ್ಯ ಸ್ಪರ್ಧೆ

ಕುಲಾಲ ಸಂಘ ಮುಂಬಯಿ ಇದರ ಮುಖವಾಣಿ **‘ಅಮೂಲ್ಯ’** ತ್ರೈಮಾಸಿಕದ **ಬೆಳ್ಳಿ ಹಬ್ಬದ** ಪ್ರಯುಕ್ತ ಸಾಹಿತ್ಯಾಭಿಮಾನಿಗಳಿಗೆ ಸಾಹಿತ್ಯ ಸ್ಪರ್ಧೆಯನ್ನು ಏರ್ಪಡಿಸಿದ್ದು, ಲೇಖಕರಿಂದ ಕಥೆ, ಲೇಖನ, ಕವನಗಳನ್ನು ಆಮಂತ್ರಿಸಲಾಗಿದೆ.

**ನಿಯಮಗಳು:**

1. ಕೃತಿಗಳು ಸ್ವಂತವಾಗಿದ್ದು ಬೇರೆಲ್ಲೂ ಪ್ರಕಟಗೊಂಡಿರಬಾರದು.
2. ಫುಲ್ ಸ್ಕೇಪ್ ಹಾಳೆಯ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಿರಬೇಕು.
3. ಕಥೆ, ಲೇಖನ, ಕವನಗಳನ್ನು ಹಿಂದೆ ಕಳುಹಿಸಲಾಗುವುದಿಲ್ಲ.
4. ಕಾರ್ಬನ್ (Xerox) ಪ್ರತಿಗಳನ್ನು ಸ್ವೀಕರಿಸಲಾಗುವುದಿಲ್ಲ.
5. ಕಥೆ, ಲೇಖನ ಹಸ್ತಲಿಖಿತ 7–8 ಪುಟ, ಡಿ.ಟಿ.ಪಿ. **(DTP- A4 Size)** 4 ಪುಟಗಳನ್ನು ಮೀರಿರಬಾರದು.
6. ಪ್ರತಿ ವಿಭಾಗದಲ್ಲಿ **ಪ್ರಥಮ, ದ್ವಿತೀಯ, ತೃತೀಯ ಹಾಗೂ 5 ಪ್ರೋತ್ಸಾಹಕ ಬಹುಮಾನ** ನೀಡಲಾಗುವುದು. ಉತ್ತಮವೆಂದು ಪರಿಗಣಿಸಲಾದ ಕಥೆ, ಲೇಖನ, ಕವನಗಳನ್ನು ‘ಅಮೂಲ್ಯ’ದ ಸಂಚಿಕೆಗಳಲ್ಲಿ ಹಂತ ಹಂತವಾಗಿ ಪ್ರಕಟಿಸಲಾಗುವುದು. ಸಂಪಾದಕ ಮಂಡಳಿ ನಿಗದಿಪಡಿಸಿದ ಸಂಭಾವನೆಯನ್ನು ಲೇಖಕರಿಗೆ ಕಳುಹಿಸಲಾಗುವುದು.
   (ನಗದು ಬಹುಮಾನದ ವಿವರ:
   ಕಥೆ – ಪ್ರಥಮ: ರೂ. 5,000/–, ದ್ವಿತೀಯ: ರೂ. 3,000/–, ತೃತೀಯ ರೂ. 2,000/–,
   ಲೇಖನ: ಪ್ರಥಮ: ರೂ. 4,000/–, ದ್ವೀತಿಯ: ರೂ.3,000/–, ತೃತೀಯ: ರೂ.2,000/–,
   ಕವನ: ಪ್ರಥಮ: ರೂ.1,500/–, ದ್ವಿತೀಯ: ರೂ.1,000/–, ತೃತೀಯ: ರೂ.750/–,
   ಪ್ರೋತ್ಸಾಹಕ ಐದು ನಗದು ಬಹುಮಾನ ಕಥೆ ಮತ್ತು ಲೇಖನ: ರೂ.750–, ಕವನ: ರೂ.500/–)
7. ಬರಹಗಳು ದಿನಾಂಕ **31.08.2023**ರ ಒಳಗೆ **The Editor. ‘Amoolya’ Quarterly, Kulala Sangha-Mumbai, 102 Malhotra Chambers, 31/33 Police Court Lane, Fort, Mumbai-400 001.** ಈ ವಿಳಾಸಕ್ಕೆ ತಲುಪಿಸಬೇಕು.
8. ಲೇಖಕರು ತಮ್ಮ ಹೆಸರು, ಮೊಬೈಲ್ ನಂಬ್ರ, Passport Sizeನ ಭಾವಚಿತ್ರ, ವಿಳಾಸವನ್ನು ಪ್ರತ್ಯೇಕ ಕಾಗದದಲ್ಲಿ ಲಗತ್ತೀಕರಿಸಬೇಕು.
9. ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಆಸ್ಪದವಿಲ್ಲ.
10. ತೀರ್ಪುಗಾರರ ನಿರ್ಧಾರವೇ ಕೊನೆಯ ನಿರ್ಧಾರ.
    ಫಲಿತಾಂಶದ ವಿವರವನ್ನು ಅಕ್ಟೋಬರ್ 2023 ತಿಂಗಳ ‘ಅಮೂಲ್ಯ’ ಸಂಚಿಕೆ ಹಾಗೂ ಪ್ರಮುಖ ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

---

## ಮುಂಬಯಿ ವಿಶ್ವವಿದ್ಯಾಲಯ ಕನ್ನಡ ಎಂ.ಎ ಅಧ್ಯಯನಕ್ಕೆ ಅವಕಾಶ

ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದಲ್ಲಿ ಎಂ.ಎ, ತರಗತಿಯ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.
ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯವು ಕನ್ನಡ ಎಂ. ಎ (ಸೆಮಿಸ್ಟರ್, ರೆಗ್ಯೂಲರ್) ಪ್ರಥಮ ವರ್ಷ ತರಗತಿ (2023–2024) ನೆಯ ಸಾಲಿನ ಅಧ್ಯಯನಕ್ಕೆ ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಿ.ಎ, ಬಿ.ಕಾಂ, ಬಿ.ಎಸ್ಸಿ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದು. ತರಗತಿಗೆ ಹಾಜರಾತಿ ಕಡ್ಡಾಯವಿರುತ್ತದೆ. ಅರ್ಹ ವಿದ್ಯಾರ್ಥಿಗಳಿಗೆ ಕರ್ನಾಟಕ ಸರಕಾರದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಾರ್ಷಿಕ ಶಿಷ್ಯವೇತನ ರೂ 25,000 ಹಾಗೂ ಸರ್ವ ಪ್ರಥಮರಾದ ವಿದ್ಯಾರ್ಥಿಯೊಬ್ಬರಿಗೆ ಎಂ.ಬಿ.ಕುಕ್ಯಾನ್ ಚಿನ್ನದ ಪದಕವನ್ನು ಸಹ ವಿಶ್ವವಿದ್ಯಾಲಯದಿಂದ ನೀಡಲಾಗುತ್ತದೆ.
ಆಸಕ್ತ ಅರ್ಹ ಅಭ್ಯರ್ಥಿಗಳು ಸ್ವಲಿಖಿತ ಅರ್ಜಿಯನ್ನು ಹಾಗೂ ಎಲ್ಲ ದಾಖಲೆಗಳ ಪ್ರತಿಯನ್ನು
**Dr. G. N. Upadhya, Head, Department of Kannada, University of Mumbai, Ranade Bhavan, Vidyanagari, Santacruz (East), Mumbai – 400 098 Email: kannadadepartment@gmail.com** ಈ ವಿಳಾಸಕ್ಕೆ **ಜುಲೈ 15ರೊಳಗೆ ಕಳುಹಿಸಬಹುದು.**

**ವಿಳಾಸ:– ಡಾ.ಜಿ.ಎನ್.ಉಪಾಧ್ಯ, ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ರಾನಡೆ ಭವನ, ವಿದ್ಯಾನಗರಿ, ಸಾಂತಾಕ್ರೂಜ್, (ಪೂರ್ವ) ಮುಂಬಯಿ–400098 (ದೂರವಾಣಿ ಸಂಖ್ಯೆ,** 26543530, 26543469, 26543345)
Email:kannadadepartment@gmail.com (University Website www.mu.ac.in)

# ಸಾವಿರ ಉಳಿಪೆಟ್ಟು ಆದರೆ ಒಂದು ಶಿವಲಿಂಗ...."

✍ ವನಜಾ ರಾಜನ್

ಎಲ್ಲರೂ ಕೇಳಿಯೇ ಇರಬೇಕು! ನಮಗೆ ಲಭಿಸಿರುವ ಈ ಜೀವನವನ್ನು ಹೃತ್ಪೂರ್ವಕವಾಗಿ ಜೀವಿಸಬೇಕೆಂದು ಬುದ್ಧಿ ಜೀವಿಗಳು ಹೇಳುವುದುಂಟು! ನಿರುತ್ಸಾಹ ಬೇಕಾಬಿಟ್ಟಿಯಾಗಿ ಕೊಟ್ಟ ಕೆಲಸವನ್ನು ಮಾಡುವುದು, ಮುಖ್ಯವಾಗಿ ಅಶ್ರದ್ಧೆ, ಅಕ್ಕರೆ ಇಲ್ಲದವರನ್ನು 'ಅರೆಮನಸ್ಸಿನವರೆಂದು' ಹೇಳುವುದುಂಟು (Half Hearted). ಬರಹಗಾರನಾದ 'ಪಾರ್ಕರ್ ಪಾಮರ್' (Parker Palmer) ಒಂದೆಡೆ ಹೀಗೆ ಹೇಳುತ್ತಾರೆ, "ನಿನ್ನ ಜೀವನ ಮಾತಾಡಲಿ" (Let your life speak).

ಶಿವಲಿಂಗ ನೋಡುವುದಕ್ಕೆ ಬಹಳ ಸರಳ, ಹೊರಮ್ಮೆ ಬಹಳ ನುಣುಪಾಗಿರುವ ಒಂದು ಶಿಲ್ಪ. ಅದರಲ್ಲಿ ಯಾವುದೇ ಅಂಗೋಪಾಂಗಗಳನ್ನು ಮೂಡಿಸಬೇಕಾಗಿಲ್ಲ. ಶಿವಲಿಂಗಕ್ಕೆ ಅಭಯ ಹಸ್ತವಾಗಲೀ, ವರದ ಹಸ್ತವಾಗಲೀ, ತಲೆ, ಮೂಗು, ಕಣ್ಣು ಯಾವುದೂ ರೂಪಿಸಬೇಕಾಗಿಲ್ಲ. ಹಂಪೆಯಲ್ಲಿರುವ ವಿರೂಪಾಕ್ಷ ಸ್ವಾಮಿಯಲ್ಲಿನ ಶಿವಲಿಂಗದಂತೆ ಬಹಳ ಪುಟ್ಟದಾಗಿರಬಹುದು ಅಥವಾ ತಂಜಾವೂರಿನ ಬೃಹದೀಶ್ವರ ಸ್ವಾಮಿ ಯಂತೆ ಬಹಳ ಬೃಹದಾಕಾರವನ್ನೇ ಹೊಂದಿರಬಹುದು. ಅದನ್ನು ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಇರಬಹುದಾದ (ಈಗ ಬಿಡಿ Mixie) ರುಬ್ಬುಗುಂಡಿನ ಆಕಾರಕ್ಕೆ ಹೋಲಿಸಬಹುದು. ಬರಿಯ ಆಕಾರ ಸಾದೃಶ್ಯವೇ ಹೊರತು, ರುಬ್ಬು ಗುಂಡಿಗೆ, ಶಿವಲಿಂಗದ ಮಹತ್ವ ಹೇಗೆ ಬರಬೇಕು?

ಅದು ಸರಿ! ಈ ಬಗೆಯ ಒಂದು ಸರಳವಾದ ಶಿಲಾರೂಪವನ್ನು ಸಿದ್ಧಪಡಿಸಲು ಸಾವಿರ ಉಳಿಪೆಟ್ಟು ಏಕೆ ಬೀಳಬೇಕು? ನೀವು ಕೇಳಬಹುದು . ಆದರೆ ಆ ಕೆಲಸಕ್ಕೆ ಇಳಿದಾಗಲೇ ಅದರ ಕ್ಲೇಷ ಅರ್ಥವಾಗಬೇಕಾದರೆ ಅದು ದೀರ್ಘ ಕಾಲದ 'ಕೃಷಿ' ಎಂಬುದು ಅರ್ಥವಾಗುವುದು. ಶಿಲ್ಪಿ ಲಿಂಗವಾಗುವಂತಹ ಸರಿಯಾದ ಶಿಲೆಯನ್ನು ಆರಿಸಿಕೊಂಡು (ಎಲ್ಲಾ ಕಲ್ಲುಗಳು ಶಿವಲಿಂಗವಾಗುವುದಿಲ್ಲ) ಅದನ್ನು ಬೇಕಾದ ಅಳತೆಗೆ ಕತ್ತರಿಸಿಕೊಂಡು ಶಿಲ್ಪ ಶಾಸ್ತ್ರ ವಿಧಿಯಂತೆ ಅದಕ್ಕೆ ಅಗತ್ಯವಾದ ಸಂಸ್ಕಾರಗಳನ್ನು ಮಾಡಿ ಸಾವಧಾನವಾಗಿ ಏಕಚಿತ್ತದಿಂದ 'ಕೃಷಿ' ಮಾಡಿದರೆ ಮಾತ್ರ ಕೊನೆಯಲ್ಲಿ ಆಲಯದಲ್ಲಿ ಪ್ರತಿಷ್ಠಾಪಿಸುವುದಕ್ಕೆ ಯೋಗ್ಯವಾದ ಶಿವಲಿಂಗ ಸಿದ್ಧವಾಗುತ್ತದೆ!

ಒಂದು ದಿನದ ಕೆಲಸವಲ್ಲ! ಹಾಗೆಯೇ ಲೋಕದಲ್ಲಿ ಹುಟ್ಟಿದ ಒಂದು ಕೂಸು, ಬೆಳೆದು, ಬಾಲಕನಾಗಿ, ವಿದ್ಯೆ ಗಳಿಸಿ, ಸುಸಂಸ್ಕೃತನಾಗಿ, ಸದೃಢಸ್ವರಾಗಿ ಬಾಳುವಂತಾಗಬೇಕಾದರೆ ಅವನು ಎಷ್ಟು ಶಿಕ್ಷಣ ಪಡೆಯಬೇಕು! ತಾಯಿ ತಂದೆ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಇವರೆಲ್ಲರ ನಡುವೆ ಬಾಳಲು ಪಳಗಿ ಬದುಕಿನ ನಾನಾ ರೀತಿಯ ಪಾಠಗಳನ್ನು ಕಲಿತು ಗುರು ಸೇವೆ ಮಾಡಿ, ಉಪದೇಶ ಹೊಂದಿ ಪರಿಪಕ್ವವಾದಾಗಲೇ ಅವನು ಲೋಕದಲ್ಲಿ ಪ್ರಯೋಜಕನಾಗಿ ಜನಸಾಮಾನ್ಯನಾಗಿ ಶೋಭಿಸುತ್ತಾನೆ. ಹಲವರ ಪ್ರಭಾವ ಅವನ ಮೇಲೆ ಬೀಳುತ್ತದೆ. ಆಗಲೇ ಅವನ ಜೀವನ ಸಾರ್ಥಕವೆನಿಸುವುದು! ಸಾವಿರ ಉಳಿಪೆಟ್ಟು ಆದರೇನೇ ಶಿವಲಿಂಗ"

# ಈಗ ಮಳೆ ಏಕೆ ಬರುತ್ತಿದೆ

✍ **ಶಿವಶಂಕರ್ ಡಿ. ಕೆ**



ಮಳೆ ನೀರು ಆಗಸದಿಂದ ಬರುವಂತಹದು. ಆದರೆ ಆ ಮೋಡಗಳನ್ನು ತರುವ ಮಾರುತನೇಕೆ ನಮ್ಮಲ್ಲಿಗೆ ಈ ಮಳೆಯನ್ನು ತರುತ್ತಾನೆ? ನಮ್ಮಲ್ಲಿ ಯಾರೂ ಇದರ ಬಗ್ಗೆ ಯೋಚನೆ ಮಾಡುವುದಿಲ್ಲ ಮಕ್ಕಳಿಗೂ ಹೇಳಿಕೊಡುವುದಿಲ್ಲ. ಗಾಳಿ ಯಾವಾಗಲೂ ಆಗಸದಲ್ಲಿ ಸುತ್ತುತ್ತಿರುತ್ತದೆ. ತುಂಬಾ ಶಾಖವಾದಾಗ ಗಾಳಿ ಮೇಲೆರುತ್ತದೆ. ಅದರೊಂದಿಗೆ ಕಡಲಿನ ನೀರು ಹಬೆಯಾಗಿ ಮೇಲೇರಿ ಮೋಡವಾಗುತ್ತದೆ. ಮೇಲೆ ಸೆಕೆ ಕಡಿಮೆ, ಕೆಳಗಿನ ಗಾಳಿಯ ಒತ್ತಡ ಹೆಚ್ಚಾದರೆ ಮೋಡ ಇನ್ನೂ ಸರಿದು ಹೋಗುತ್ತವೆ. ಎಲ್ಲಿ ಗಿಡಮರಗಳು ಹೆಚ್ಚಾಗಿರುತ್ತದೆ ಅಲ್ಲಿ ತಂಪಾಗಿರುತ್ತದೆ. ತಂಪಾಗಿರುವ ನೆಲೆ ಕಂಡೊಡನೆ ಅಲ್ಲಿ ಮೋಡಗಳ ಹಬೆ ನೀರಾಗಿ ಸುರಿಯುತ್ತದೆ. ಅಂತೆಯೇ ನಮ್ಮ ಹಿಮಾಲಯದ ಸಾಲು ಒಂದು ಗೋಡೆಯಾಗಿ ನಿಂತಿದೆ. ಅದರ ಶಿಖರಗಳಲ್ಲಿ ಆಗಲೇ ಮೋಡಗಳು ತಂಪಾಗಿ ಮಂಜುಗಟ್ಟಿವೆ. ಈ ಮಂಜುಗಟ್ಟಿದ ಬೆಟ್ಟದ ತುದಿಗಳು ಮತ್ತಷ್ಟು ಮೋಡಗಳನ್ನು ತಮ್ಮೆಡೆಗೆ ಸೆಳೆಯುತ್ತವೆ. ಹೀಗೆ ಹಿಮಾಲಯದತ್ತ ಓಡುತ್ತಿರುವ ಮೋಡಗಳು ತಂಪಾಗಿ ಹಾದಿಯಲ್ಲಿಯೇ ದೆಹಲಿ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಬಿಹಾರ್, ಅಸ್ಸಾಂ ಗಳಲ್ಲಿ ಮಳೆಗೆರೆಯುತ್ತವೆ. ಈಗ ಒಂದು ಕ್ಷಣ ಈ ಹಿಮಾಲಯದ ಗೋಡೆ ನಮ್ಮ ಉತ್ತರದಲ್ಲಿ ಇರಲಿಲ್ಲ ಎಂದು ನೋಡೋಣ, ಆಗ ನಮ್ಮಲ್ಲಿ ಮಳೆ ಸುರಿಯುತ್ತಿತ್ತೆ? ಇಲ್ಲ, ಆ ಮೋಡಗಳು ಉಜ್ಬೇಕಿಸ್ತಾನ, ಸೈಬೀರಿಯಾ, ಟಿಬೆಟ್, ಮಂಗೋಲಿಯ ದಾಟಿ ಉತ್ತರ ಧ್ರುವದಡೆಗೆ ಹೋಗಿ ಅಲ್ಲಿ ಮಂಜಾಗಿ ಸುರಿಯುತ್ತಿದ್ದವು.

ಹೀಗೆ ನಮಗೆ ಹಿಮಾಲಯ ಒಂದು ಮೋಟಗಳ ತಡೆಯಾಗಿ ವರವಾಗಿದೆ, ಉತ್ತರದ್ರುವದೆಡೆಗೆ ಹೋಗಬೇಕಿದ್ದ ಮೋಡಗಳನ್ನು ತಡೆದು ಈ ನಾಡನ್ನು ಮಳೆ ಹೊಳೆಗಳ ನಾಡಾಗಿಸಿದೆ. ಅದರ ಮೇಲೆ ಕುಳಿತಿರುವ ಶಿವನನ್ನು ಇದಕ್ಕಾಗಿಯೇ ನಾವು ಗಂಗಾಧರ ಎಂದು ಕರೆಯುವುದು. ಅವನಿದ್ದಲ್ಲಿ ಗಂಗೆಯ ಹರಿದಾಟ ಕೊನೆಯಾಗಿ ಈ ಧರೆಗೆ ಇಳಿಯುತ್ತಾಳೆ. ಹಿಮಾಲಯ ಎತ್ತರೆತ್ತರಕ್ಕೆ ಏರುತ್ತಿದೆ ಎಂದು ಹೇಳುತ್ತಾರೆ. ಎಷ್ಟು ಎತ್ತರ ಸರಿದರೂ ನಮಗೆ ಮಳೆಯ ಬರವಿಲ್ಲ. ಆದರೆ ಹಿಮಾಲಯ ಬೆಳೆಯುವುದೆಂದರೆ ಭಾರತ ಟಿಬೆಟ್ ಕೆಳಗೆ ಇನ್ನೂ ಸರಿದಾಗ ಮುಂದೆ ಒಂದು ಕಾಲದಲ್ಲಿ ಉತ್ತರಾಖಂಡ, ಹಿಮಾಚಲ ಪ್ರದೇಶ ಕಾಶ್ಮೀರಗಳೆಲ್ಲವೂ ಹಿಮಾಲಯದ ಒಳ ಸೇರುತ್ತವೆ. ಈಗಾಗಲೇ ಅದರ ಮುನ್ನೋಟ ನಮಗೆ ದೊರೆಯುತ್ತಿವೆ. ಈ ಎಲ್ಲೆಡೆಯಲ್ಲಿಯೂ ಭೂಕಂಪವಾಗುತ್ತಿರುವುದು ಭಾರತ ಹಿಮಾಲಯದ ಕೆಳ ಸೇರುತ್ತಿರುವುದರಿಂದ.

# ಕಂಬನಿ



ನಿಶಾಂತ ರಘುನಾಥ್ ಅವರು ನಮ್ಮ ಅಜೀವ ಸದಸ್ಯರಾದ ಕೆ. ರಘುನಾಥ್ ಹಾಗೂ ಗಿರಿಜಾ ಶಾಸ್ತ್ರಿ ಅವರ ಹಿರಿಯ ಮಗ. ಇತ್ತೀಚೆಗೆ ಪುಣೆಯಲ್ಲಿ ತೀವ್ರ ಮೆದುಳು ಸ್ರಾವದಿಂದಾಗಿ ಚಿಕಿತ್ಸೆ ಫಲಕಾರಿಯಾಗದೆ ವಿಧಿವಶರಾದರು.

'Allianz company' ಯಲ್ಲಿ technical head ಆಗಿದ್ದರು. 37 ವರ್ಷಗಳು. ಹೆಂಡತಿ, ನಾಲ್ಕು ವರ್ಷದ ಮಗ ತಂದೆತಾಯಿ, ಸಹೋದರ ಹಾಗು ಅಪಾರ ಬಂಧುವರ್ಗ ಮತ್ತು ಸ್ನೇಹ ಬಳಗವನ್ನು ಬಿಟ್ಟು ಹೋಗಿದ್ದಾರೆ.

ಗಿರಿಜಾ ಶಾಸ್ತ್ರಿಯವರು ನಮ್ಮ ನೇಸರುವಿನ ಸಂಪಾದಕಿಯಾಗಿದ್ದರು. ಮೈಸೂರು ಅಸೋಸಿಯೇಷನ್ ದುಃಖಿತ ಕುಟುಂಬಕ್ಕೆ ಸ್ವಾಂತನ ಬಯಸುತ್ತದೆ. ದೇವರು ಅವರಿಗೆ ಈ ನೋವನ್ನು ಸಹಿಸುವ ಶಕ್ತಿ ಕೊಡಲಿ.

# ಗುರು ಪೌರ್ಣಿಮಾ

ಗುರು ಎಂದರೇನು? ಗುರು ಎಂದರೆ 'ತೂಕ' ಎಂದರ್ಥ. ಜ್ಞಾನದಿಂದ ತೂಗುತ್ತಿರುವವರಿಂದ ನಾವು ತುಸು ಜ್ಞಾನವನ್ನು ಪಡೆಯಲೋಸುಗ ಅವರನ್ನು ಅನುಸರಿಸಿ ಕಲಿಯುತ್ತೇವೆ. ನಮಗೇ ಜ್ಞಾನವಿದ್ದರೂ ಕೂಡ, ಅದನ್ನು ಹೇಗೆ



ಬಳಸಿಕೊಳ್ಳಬೇಕು, ಎಂಬುದನ್ನು ನಾವು ಗುರುವಿನಿಂದೇ ಕಲಿಯಬೇಕು. ಈಗ ಭಸ್ಮಾಸುರನ ಕಥೆಯನ್ನು ನೋಡಿದಾಗ, ವರ ಸಿಕ್ಕ ಮೇಲೆ ಅದನ್ನು ಹೇಗೆ ಬಳಸಿಕೊಳ್ಳಬೇಕು, ಎಂಬುದನ್ನು ನಾವು ಗುರುವಿನಿಂದೇ ಕಲಿಯಬೇಕು. ಈಗ ಭಸ್ಮಾಸುರನ ಕಥೆಯನ್ನು ನೋಡಿದಾಗ, ವರ ಸಿಕ್ಕ ಮೇಲೆ ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ಅರಿಯದ ಭಸ್ಮಾಸುರ, ಮೋಹಿನಿಯ ವಶಕ್ಕೆ ಸೇರಿ ತಾನೇ ಭಸ್ಮವಾಗುತ್ತಾನೆ. ಗುರಿವಿದ್ದಿದ್ದರೆ ಅವನು ಹಾಗೆ ಮಾಡುತ್ತಿರಲಿಲ್ಲ.

ಇಲ್ಲಿ ಪೌರ್ಣಿಮೆಯನ್ನು ಏಕೆ ಆಚರಿಸುತ್ತೇವೆ? ಜ್ಞಾನ ಬೆಳಂದಿಗಳನ ತೆರ. ಬೆಳಕು ಬರುತ್ತದೆ ಆದರೆ ಅದರ ಬಿಸಿ ನಿಮ್ಮನ್ನೇನೂ ಸುಡುವುದಿಲ್ಲ. ಹೀಗೆ ಜ್ಞಾನ ನಮ್ಮ ಬಾಳನ್ನು ತಂಪು ಮಾಡಬೇಕು; ಕೆಂಪು ಮಾಡಬಾರದು. ಅಂತೆಯೇ ನಮಗೆ ದೊರಕಿದ ಜ್ಞಾನವನ್ನು ನಾವು ಬೇರೆಯವರಿಗೆ, ಅಂದರೆ ತಕ್ಕವರಿಗೆ ಹಂಚಬೇಕು ತಿಳುವಳಿಕೆಯಾಗುವುದಿಲ್ಲ. ಜ್ಞಾನ ಹರಡುತ್ತಾ, ಎಲ್ಲರ ನಡೆವಳಿಕೆಯನ್ನೂ ತಿದ್ದುತ್ತಾ ಹೋದರೆ ಮಾತ್ರ ಅದು ಜ್ಞಾನವಾಗುತ್ತದೆ. ಹೀಗೆ ಗುರುವಿನ ಪಾತ್ರ ಮಹತ್ವವಾದದ್ದು. ಈಗ ನಮ್ಮ ಶಾಲೆಗಳಲ್ಲಿ ಇರುವ ಎಲ್ಲಾ ಗುರುಗಳೂ ಕೂಡ ಜ್ಞಾನವನ್ನು ಹೆಚ್ಚಿಸಿಕೊಂಡು ಅದನ್ನು ಹಂಚುತ್ತಾ ಹೋದರೆ ಮಾತ್ರ ಬೆಳದಿಂಗಳು ಹರಡುತ್ತದೆ.

# ಮುಂಬಯಿ ವಿ. ವಿ : ಶೈಲಜಾ ಹೆಗಡೆ ಅವರಿಗೆ ಪಿಎಚ್.ಡಿ



ಕನ್ನಡ ವಿಭಾಗದ ಸಂಶೋಧನ ವಿದ್ಯಾರ್ಥಿ ಶೈಲಜಾ ಹೆಗಡೆ ಅವರು ಬರೆದು ಸಲ್ಲಿಸಿದ 'ಮುಂಬೈ ಕನ್ನಡ ಕಾವ್ಯ ಒಂದು ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಮುಂಬೈ ವಿಶ್ವವಿದ್ಯಾನಿಲಯವು ಅವರಿಗೆ ಕನ್ನಡದಲ್ಲಿ ಪಿಎಚ್.ಡಿ ಪದವಿ ನೀಡಿದೆ.

ಶೈಲಜಾ ಹೆಗಡೆ ಅವರು ಮುಂಬಯಿ ವಿ.ವಿ ಕನ್ನಡ ವಿಭಾಗದ ಪ್ರಾಧ್ಯಾಪಕರೂ ಮುಖ್ಯಸ್ಥರೂ ಆದ ಡಾ। ಜಿ.ಎನ್.ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದರು. ಮೂಲತಃ ಉತ್ತರಕನ್ನಡದ ಶಿರಸಿಯವರಾದ ಇವರು ಹತ್ತು ವರ್ಷಗಳಿಂದ ಮುಂಬಯಿ ವಿಶ್ವವಿದ್ಯಾಯದಲ್ಲಿ ಅಧ್ಯಯನ ನಿರತರಾಗಿದ್ದಾರೆ. ಇವರು ಮುಂಬೈ ವಿಶ್ವವಿದ್ಯಾಲಯದಿಂದ ಸಂಸ್ಕೃತ ಎಂ.ಎ, ಕನ್ನಡ ಎಂ.ಎಹಾಗೂ 'ಕಾಳಿದಾಸನ ಮೇಘದೂತ ಮತ್ತು ಕನ್ನಡ ರೂಪಾಂತರಗಳು' ವಿಷಯದ ಕುರಿತು ಕನ್ನಡ ಎಂ.ಫಿಲ್ ಪದವಿಯನ್ನೂ ಪಡೆದಿದ್ದಾರೆ. ತಮ್ಮ ಸಂಶೋಧನ ಮಹಾಪ್ರಬಂಧದಲ್ಲಿ ಇವರು, ಮುಂಬೈ ಕನ್ನಡ ಕಾವ್ಯದ ಸುಮಾರು ನೂರೈವತ್ತು ವರ್ಷಗಳಬೆಳವಣಿಗೆಯನ್ನು ಹಲವು ಆಯಾಮಗಳಲ್ಲಿ ಚರ್ಚಿಸಿದ್ದಾರೆ.

# Few more strides before the centenary



M.A.N. Prasad

**Creation of a Conference Hall:** With the auditorium being ready, we contacted banks and corporate outlets so that they could use this facility for sales meet, conferences etc. we also worked out a package which was inclusive of two teas and a lunch along with the auditorium facilities. The publicity was purely by word of mouth. We focussed on providing good service to our users.



We realised that while the auditorium is good for a crowd of 200-250 people, it was too large for a crowd of 80 to 100 people. So, we thought that we need to create a conference hall on the 1st floor, which will be useful for gatherings of 80 to 100 people or lectures, performances where the audience is of that number. Since we had spent a lot of money on the auditorium, the conference hall was to be on a shoe string budget.

We had indicated to our tenants that we would require the premises after five years. Luckily their business flourished well and they needed to shift larger premises. The air conditioning on the 1st floor was totally written off in the books of our tenants and thanks to Dr. Manjunath they decided to leave it instead of incurring expenses to remove it and take it to their new place. This was a good start for us. We realigned the ducting of the air-conditioning. We used all the leftover materials and made the conference hall. It had a stage, a dressing room, a set of wash rooms and could accommodate around 120 people. It was provided with good acoustics and a good sound system.

We now had an auditorium and a conference hall to offer. We were getting sufficient number of corporate clients. But we wanted the auditorium to be used by the performing arts. We needed to make specific effort this direction.

**Hindi theatre comes to Association:** One day M.S. Sathyu came to see our auditorium. He sent the people of I.P.T.A to explore the possibility of using our auditorium. I.P.T.A, along with three other groups indicated their willing ness to stage plays in our auditorium, they wanted certain concession. We offered them a reduced rate on week days and the normal rates over the week end. These groups started advertising in newspaper. Our auditorium got good publicity.

Many in our committee felt we have lowered our rental unduly for these people. They overlooked the fact that these people are advertising which helps us in long term. There were also demand for Gujarati and Marathi plays. The Auditorium was going on in full swing.

# ವಾಹನಗಳು



ವಾಹನ ಅಥವಾ ಬಂಡಿಗಳು ನಮ್ಮನ್ನು ಒಂದೆಡೆಯಿಂದ ಇನ್ನೊಂದಡೆಗೆ ಕೊಂಡೊಯ್ಯುವ ಅಣೆಗೆಗಳಾಗಿವೆ. ಇವುಗಳು ಮನುಷ್ಯರಿಗೆ ಬೇಕು. ಏಕೆಂದರೆ ನಾವೇ ನಮ್ಮೆಲ್ಲ ಸಾಮಾನುಗಳನ್ನು ಕೊಂಡೊಯ್ಯುವ ಕಸುವು ನಮಗಿಲ್ಲ.

ಆದರೆ ದೇವನೆನಿಸುವ ಶಕ್ತಿಗಳಿಗೂ ಈ ವಾಹನಗಳು ಏಕೆಬೇಕು? ನಾವು ಪೂಜಿಸುವ ಎಲ್ಲಾ ದೇವರಿಗೂ ನಾವೊಂದು ವಾಹನವನ್ನು ಕಲ್ಪಿಸಿದ್ದೇವೆ. ವಿಷ್ಣುವಿಗೆ ಗರುಡ, ಶಿವನಿಗೆ ನಂದಿ ಗಣೇಶನಿಗೆ ಇಲಿ, ಪಾರ್ವತಿಗೆ ಸಿಂಹ, ಸರಸ್ವತಿಗೆ ಹಂಸ. ಈ ಶಕ್ತಿಗಳೇಕೆ ವಾಹನವನ್ನು ಬಯಸುತ್ತವೆ ಅಥವಾ ಇದು ನಾವು ಕಟ್ಟಿರುವ ಕಥೆಯೇ? ನೋಡೋಣ...

✍ ಡಾ. ಬಿ. ಆರ್. ಮಂಜುನಾಥ್

ವಿಷ್ಣು ಮೊಟ್ಟ ಮೊದಲು ನಮಗೆ ಕಾಣೋದು ಋಗ್ವೇದದಲ್ಲಿ. ಅದರಲ್ಲಿ ವಿಷ್ಣು ಬಾನನ್ನು ಮೂರು ಹೆಜ್ಜೆಗಳಲ್ಲಿ ದಾಟುತ್ತಾನೆ ಎಂದಿದೆ. ಅಂದರೆ ಈ ಶಕ್ತಿ ಆಕಾಶದಲ್ಲಿ ಹೋಗುವವನು ಎಂದಾಗುತ್ತದೆ. ಸರಿ ನಮಗೆ ಆಕಾಶದಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ಬೇಗ ಹಾರಡುವ ಶಕ್ತಿ ಯಾವುದು? ಗರುಡ ಎಂದರೆ ಒಂದು ಬಗೆಯ ಹದ್ದು. ಇದೇ ವೇಗವಾಗಿ ಹಾರಾಡುವುದರಿಂದ ಅದನ್ನು ಆಕಾಶದಲ್ಲಿ ಸಂಚರಿಸುವ ವಿಷ್ಣುವಿಗೆ ವಾಹನವಾಗಿ ಇಡುವುದು ನಮ್ಮ ಕಲ್ಪನೆಗೆ ಲೇಸಾಗಿದೆ.



ಸರಿ, ಗಣೇಶ ಆನೆಯಂತಹ ಮೈ ಉಳ್ಳವನಾಗಿದ್ದಾರೆ. ಅವನಿಗೆ ಇಲಿ ವಾಹನ ಸರಿಯೇ? ಆನೆಗೆ ಯಾವ ಅಡೆ ತಡೆಯೂ ಇಲ್ಲ, ದಿಟ. ಆದರೆ ಆನೆಯನ್ನು ಹಿಡಿಯಲು ಎರಡು ಬಗೆ ಇವೆ. ಒಂದು, ಒಂದು ಗುಂಡಿಯನ್ನು ತೆಗೆದು ಅದರ ಮೇಲೆ ಬಿದಿರುಗಳಲ್ಲಿ ಒಂದು ತಟ್ಟನ್ನು ಹಣೆದು ಅದರ ಮೇಲೆ ಹಸಿರನ್ನು ಬೆಳೆಸಿದಾಗ ಆನೆ ಆ ಹಸಿರನ್ನು ತಿನ್ನಲು ಬಂದು ಆ ಗುಂಡಿಗೆ ಬೀಳುತ್ತಾ ಸಿಕ್ಕಿಕೊಳ್ಳುತ್ತದೆ. ಎರಡನೆಯ ಬಗೆ, ಆನೆಯನ್ನು ಬಲೆಯಲ್ಲಿ ಸಿಕ್ಕಿ ಹಾಕಿ ಆಮೇಲೆ ಅದನ್ನು ಹಗ್ಗಗಳಿಂದ ಬಿಗಿದು ಕಟ್ಟಿ ಹಾಕಿದಾಗ ಆನೆ ಏನೂ ಮಾಡಲಾಗದೆ ಸಿಕ್ಕಿ ಹಾಕಿಕೊಳ್ಳುತ್ತದೆ. ಆಗ ಇಲಿ ಬಂದು ತನ್ನ ಹಲ್ಲುಗಳಿಂದ ಆ ಹಗ್ಗಗಳನ್ನು ಕಟಕಟ ಕಡಿದು ಹಾಕಿ ಆನೆಯನ್ನು ಆಸರೆಯಿಂದ ಹೊರ ಬೀಳಲು ಅನುವು ಮಾಡುತ್ತದೆ. ಆನೆಯಿಂದಲೂ ಬಗ್ಗದ ಆ ಹಗ್ಗವನ್ನು ಇಲಿ ಕಡಿದು ಹಾಕುತ್ತದೆ ಆದ್ದರಿಂದ ನಮ್ಮ ಹಿರಿಯರ ಕಲ್ಪನೆ. ಇನ್ನೂ ಪಾರ್ವತಿ, ಈ ಶಕ್ತಿಯನ್ನು ತಿಳಿಯಲು ಆಗುವುದೇ ಇಲ್ಲ. ಏಕೆ ದುರ್ಗಾ ಅಂದರೆ ತಿಳಿಯಲು ದುರ್ಗಮವಾಗಿರುವವಳು. ಆದರೆ ಈಕೆ ಬನಶಂಕರಿ, ಬನವಾಸಿ ಎಂದರೆ ಕಾಡಿನಲ್ಲಿಯೇ ಮೃಗಗಳೊಂದಿಗೆ ಓಡಾಡುವವಳು. ಕಾಡಿನಲ್ಲಿ ಸಿಂಹವೇ ರಾಜ. ಈಕೆ ಆ ರಾಜನ ಮೇಲೆ ಓಡಾಡುವುದರಿಂದ ಮಿಕ್ಕೆಲವೂ ಈಕೆಗೆ ಅಧೀನ. ಈ ಬನಶಂಕರಿಯೇ ನಮ್ಮ ಕರುನಾಡಿನ ಅಧಿದೇವತೆ. ಈಕೆಯೇ ಭಾರತ ಮಾತೆ.





ಇನ್ನೂ ಸರಸ್ವತಿ, ಸರಸ್ ಎಂದರೆ ಕೊಳ. ಕೊಳದಲ್ಲಿ ಲೇಸಾಗಿ ಓಡಾಡುವ ಒಂದು ಕೊಳದಿಂದ ಇನ್ನೊಂದು ಕೊಳಕ್ಕೆ ಹಾರಾಡುವ ಹಕ್ಕಿಹಂಸ. ಸರಸ್ವತಿ ಎಂದರೆ ಒಂದು ನದಿದೇವತೆ. ಆ ನದಿಗೆ ಹರಿಯಲು ಹಂಸವೇ ಲೇಸಾದವಾಹನ.

ಕಡೆಗೆ ಶಿವನ ವಾಹನ ನಂದಿ ಏಕೆ?

ಈತ ಕೈಲಾಸದಲ್ಲಿಯೇ ಕೂತು ಏನೂ ಬೇಡದೆ ತಪಮಾಡುವ ಶಕ್ತಿ, ಇವನಿಗೇಕೆ ವಾಹನ? ಸ್ವಲ್ಪ ಯೋಚಿಸಿ, ನೀವು ನಂದಿ ಅಥವಾ ಗೂಳಿಯನ್ನು ಸರಿಯಾಗಿ ನೋಡಿದ್ದೀರಾ?



ಇಲ್ಲ ನೀವು ನೋಡಿಲ್ಲ. ನಂದಿ ತನ್ನ ಹೆಗಲ ಮೇಲೆ ಒಂದು ಶಿವಲಿಂಗವನ್ನು ಹೊತ್ತು ಸದಾ ತಿರುಗುತ್ತಿರುತ್ತದೆ. ಅದು ಈ ಶಿವಲಿಂಗಕ್ಕೆ ಯಾವಾಗಲೂ ವಾಹನ. ಅದರಂತಹ ಶಿವಭಕ್ತ ಬೇರಿಲ್ಲ. 600 ವರ್ಷಗಳಾದರೂ ಕೂಡ ಅಲ್ಲಿ ದೇವಾಲಯವನ್ನು ನೆಲೆಸಮ ಮಾಡಿ ಮಸೀದಿಯನ್ನು ಕಟ್ಟಿದರೂ ಅದು ಎಡಬಿಡದೆ ಅಲ್ಲಿಯೇ ಶಿವನನ್ನು ನೋಡುತ್ತಾ ಕೂತಿರುವುದು ಇಂದು ಕಾಶಿಯಲ್ಲಿಯೇ ಕಾಣುತ್ತದೆ. ಯಾವಾಗ ಶಿವ ತನ್ನ ತಪಸ್ಸಿನಿಂದ ಏಳುತ್ತಾನೋ ಆಗ ನಾನು ಅಲ್ಲಿ ಕಾದಿರಬೇಕು ಎನ್ನುವ ಈ ಭಕ್ತ ಈ ನಂದಿ.



ಹೀಗೆ ನಮ್ಮ ಹಿರಿಯರು ನಾವು ಕಾಣದ್ದನ್ನು ಕಂಡು ಈ ಶಕ್ತಿಗಳಿಗೆ ವಾಹನವನ್ನು ಕಲ್ಪಿಸಿದ್ದಾರೆ.



# ಶ್ರೀ ನಾರಾಯಣ ಪ್ರಸಾದ್

ನೇಸರು ಎಂಬ ಮಾಸ ಪತ್ರಿಕೆ ಮೂಡಿ ಬರಬೇಕು ಅದು ಮೈಸೂರು ಅಸೋಸಿಯೇಷನ್ ಮಿಕ್ಕ ಕನ್ನಡಿಗರೊಂದಿಗೆ ಮಾತನಾಡಿ ವಿಷಯಗಳನ್ನು ಹಂಚಿಕೊಳ್ಳಬೇಕು ಎಂಬ ಯೋಚನೆಗೆ ಬೇರು ಹಾಕಿದವರು ಶ್ರೀ ನಾರಾಯಣ ಪ್ರಸಾದ್‌ರವರು. ಅವರೇ 1983ರಿಂದ 1996ರ ವರೆಗೆ ಸಂಪಾದಕರಾಗಿದ್ದರು. ನೇಸರು ಮತ್ತು ಅಸೋಸಿಯೇಷನ್ನಿನ ಬೆಳವಣಿಗೆ ಏಳಿಗೆ ಅವರು ಮೈಸೂರು ಅಸೋಸಿಯೇಷನ್‌ನ ಕಾರ್ಯದರ್ಶಿಗಳಾಗಿದ್ದ ಹೊತ್ತಿನಲ್ಲಿ ಆಯಿತು. ಅವರು ಕಾರ್ಯದರ್ಶಿಗಳಾಗಿದ್ದಾಗಲೇ ನಮ್ಮ ಹೊಸ ಆಡಿಟೋರಿಯಂ ಅಂತೆಯೇ ಗಣೇಶನ ಮೂರ್ತಿ ಸ್ಥಾಪನೆಯಾಗಿದ್ದನ್ನು ನಾವೆಲ್ಲ ನೆನೆಯುತ್ತೇವೆ. ಮುಂದೆ ಅವರು ಬೆಂಗಳೂರಿಗೆ ಹೋಗಿ ನೆಲೆಸಿದರು ಮೈಸೂರು ಅಸೋಸಿಯೇಷನ್ನಿನ ಬಗ್ಗೆ ಕಾತುರ, ಹುಮ್ಮಸ್ಸು ಹೋಗಲಿಲ್ಲ. ಇಂದು ನೇಸರುವಿಗೆ ಪ್ರತಿ ತಿಂಗಳು ಒಂದು ಕಾಣಿಕೆಯ ಬರಹವನ್ನು ನೀಡುತ್ತಿದ್ದಾರೆ.

ಅವರು ಈಗ ಮೂರು ವರ್ಷಗಳಿಂದ ಒಂದಲ್ಲ ಒಂದು ದೈಹಿಕ ತೊಂದರೆಯಿಂದ ಬಳಲುತ್ತಿದ್ದಾರೆ. ನಮ್ಮೆಲ್ಲರ ಹಾರೈಕೆ ಗಣೇಶನ ಆಶೀರ್ವಾದದಿಂದ ಗುಣವಾಗಿ ಮತ್ತೆ ಮನೆಗೆ ಮರಳಿದ್ದಾರೆ. ಅವರ ಅರ್ಧಾಂಗಿ ಭಾರತಿ ತಾನು ಬಳಲುತ್ತಿದ್ದರೂ ಕೂಡ ಎಡೆಬಿಡದೆ ಪ್ರಸಾದವರನ್ನು ನೋಡಿಕೊಂಡಿದ್ದು ಯಾರೂ ಮರೆಯುವಂತಿಲ್ಲ.

ಪ್ರಸಾದ್‌ರವರು ಇನ್ನೂ ನೂರು ಕಾಲ ಅಸೋಸಿಯೇಷನ್ನಿನ ಸೇವೆಯಲ್ಲಿ ತೊಡಗುವಂತಹ ಆರೋಗ್ಯವನ್ನು ಸಿದ್ಧಿವಿನಾಯಕ ದಯಪಾಲಿಸಲಿ ಎಂದು ನಾವು ಕೋರುತ್ತೇವೆ.

**ಅಸೋಸಿಯೇಷನ್‌ನ ಕಾರ್ಯಕಾರಿ ಸಮಿತಿ ಹಾಗೂ ಸದಸ್ಯರು.**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077